ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧ Volume - 161	ಬೆಂಗಳೂರು, ಮಂಗಳವಾರ, ೧೭, ಮಾರ್ಚ್, ೨೦೨೬(ಫಾಲ್ಗುಣ, ೨೬, ಶಕವರ್ಷ, ೧೯೪೭) BENGALURU, TUESDAY, 17, MARCH, 2026(PHALGUNA, 26, SHAKAVARSHA, 1947)	ಸಂಚಿಕೆ ೫೪ Issue 54

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಆರ್.ಸಿ.ಎಸ್: ಐಸಿಡಿಪಿ:ಸಂ.ಸಂ-1:96: 2025-26, ದಿನಾಂಕ:07.01.2026.
2. ಸರ್ಕಾರದ ನೋಟೀಸ್ ಸಂಖ್ಯೆ:ಸಿಒ 14 ಸಿಎಸ್ಆರ್ 2026, ದಿನಾಂಕ:27.01.2026.
3. ಅಧ್ಯಕ್ಷರು, ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ (ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಪತ್ರ ದಿನಾಂಕ:06.02.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1)ರಲ್ಲಿ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯಲ್ಲಿನ ವಿವರವು ಈ ಕೆಳಕಂಡಂತಿದೆ.

ಶ್ರೀ ಆರ್.ರವಿಶಂಕರ್, ಶ್ರೀ ಪಿ.ಕಾಂತರಾಜ್ ಹಾಗೂ ಶ್ರೀ ವೆಂಕಟೇಶ್ ಕೆ.ಹೆಚ್ ಇವರುಗಳು ದಿನಾಂಕ:10.06.2022ರಂದು ಸಲ್ಲಿಸಿರುವ ಮನವಿಯಲ್ಲಿ ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ ರಿ), ಕಿಟ್ಟದಹಾಳ್, ಚಿತ್ರದುರ್ಗ ಜಿಲ್ಲೆ ಈ ಸಂಘದಲ್ಲಿ ಒಟ್ಟು 60 ಜನ ಸದಸ್ಯರುಗಳ ಪೈಕಿ 56 ಜನ ಸದಸ್ಯರು ಮರಣ ಹೊಂದಿದ್ದು, 4 ಜನ ಸದಸ್ಯರು ಮಾತ್ರ ಜೀವಂತವಾಗಿರುವುದಾಗಿ ತಿಳಿಸಿರುತ್ತಾರೆ.

ಆದುದರಿಂದ ಮೇಲ್ಕಂಡ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಹಾಗೂ ದೂರು ಅರ್ಜಿದಾರರಿಗೆ ದಿನಾಂಕ:11.07.2022ರಂದು ನೋಟೀಸ್ ನೀಡಲಾಗಿದ್ದು, ಉಭಯ ಪಕ್ಷಗಾರರು ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಗೆ ಹಾಜರಾಗಿ ಸಲ್ಲಿಸಿರುವ

ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಭಾರತಿ ಶಿಶು ವಿಹಾರ ಎಜುಕೇಷನ್ ಸೊಸೈಟಿ (ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಸ್ಥೆಯ ನೈಜ ಸದಸ್ಯರನ್ನು ಆಯ್ಕೆ ಮಾಡಿಕೊಂಡಿರುವ ಬಗ್ಗೆ, ಸದರಿ ಸಂಸ್ಥೆಯ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಯ ಪ್ರತಿಯನ್ನು ಸಲ್ಲಿಸದೇ ಇದ್ದು, ನಿಯಮಾನುಸಾರ ಆಯ್ಕೆಯಾಗಿರುವ ನೈಜ ಸದಸ್ಯರುಗಳು ಇಲ್ಲದೇ ಕಾರ್ಯಕಾರಿ ಸಮಿತಿ ರಚನೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಜಿಲ್ಲೆ, ಇವರು ತಿಳಿಸಿರುತ್ತಾರೆ..

ಈ ಕುರಿತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿಯಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸಿದ ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಸದುರ್ಗ ತಾಲ್ಲೂಕು, ಇವರು ಸದರಿ ಸಂಸ್ಥೆಯು ಮೂಲ ಸದಸ್ಯರ ಸದಸ್ಯತ್ವದ ಬಗ್ಗೆಯಾಗಲೀ ಮತ್ತು ಹಾಲಿ ಇರುವ ಸದಸ್ಯರುಗಳ ಸದಸ್ಯತ್ವ ಪಡೆದ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲವೆಂದೂ, ದಿ:27-05-2012 ರಂದು ನಡೆದ 2012ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯ ವಿಷಯ ಸಂಖ್ಯೆ: 04 ರಲ್ಲಿ ಹೊಸ ಸದಸ್ಯರುಗಳನ್ನು ಸೇರಿಸಿಕೊಳ್ಳುವುದರ ಬಗ್ಗೆ ತೀರ್ಮಾನಿಸಿರುವುದಾಗಿ ದಾಖಲಿಸಿರುತ್ತಾರೆಯೇ ವಿನಃ ಯಾವುದೇ ಸದಸ್ಯರುಗಳ ಹೆಸರುಗಳನ್ನು ನಡವಳಿ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲವೆಂದೂ ತಿಳಿಸಿರುತ್ತಾರೆ.

ಸರ್ವ ಸದಸ್ಯರ ಪಟ್ಟಿಯಲ್ಲಿನ 12 ಜನ ಸದಸ್ಯರು ಮರಣಹೊಂದಿದ್ದು, ಅವರ ಪಟ್ಟಿಯನ್ನು ಸಲ್ಲಿಸಿರುವುದರಿಂದ ಸದರಿ ಸಂಸ್ಥೆಯ ನೈಜ ಸದಸ್ಯರುಗಳ ಸದಸ್ಯತ್ವದ ಬಗ್ಗೆ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ಸಂಸ್ಥೆಯ ನೈಜ ಸದಸ್ಯರ ಪಟ್ಟಿಯ ಬಗ್ಗೆ ಗೊಂದಲಗಳಿರುವುದಾಗಿ ವಿಚಾರಣಾಧಿಕಾರಿಯವರು ವರದಿ ಮಾಡಿರುವ ಹಿನ್ನಲೆಯಲ್ಲಿ ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ(ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ ಓದಲಾದ ಕ್ರಮಾಂಕ(2) ರನ್ವಯ ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ(ರಿ), ಕಿಟ್ಟದಾಳ್-577533, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ, ಸಂಘದ ಅಧ್ಯಕ್ಷರು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ)ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸಹಮತಿ ಇದೆ ಎಂದು ತಿಳಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘದ ಆಡಳಿತಾತ್ಮಕ ಹಿತದೃಷ್ಟಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿ, ಶಾಲಾ ಶಿಕ್ಷಣ ಇಲಾಖೆ, ಹೊಸದುರ್ಗ ತಾಲ್ಲೂಕು, ಇವರನ್ನು 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 14 ಸಿಎಸ್‌ಆರ್ 2026
ಬೆಂಗಳೂರು, ದಿನಾಂಕ: 06ನೇ ಮಾರ್ಚ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಭಾರತಿ ಶಿಶುವಿಹಾರ ಎಜುಕೇಷನ್ ಸೊಸೈಟಿ ರಿ), ಕಿಟ್ಟದಹಾಳ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಈ ಸಂಘಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ,

ಶಾಲಾ ಶಿಕ್ಷಣ ಇಲಾಖೆ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-69

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಸಿಟಿಜನ್ ವೆಲ್‌ಫೇರ್ ಸೊಸೈಟಿ, ನಂ.3403, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿಜಯನಗರ 2ನೇ ಹಂತ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಏಕ ಕಡತ ಸಂಖ್ಯೆ:RCS/SOR/SOR2/2/2026-SOR (2034793).

*****

ಪ್ರಸ್ತಾವನೆ:

ಮೇಲೆ ಓದಲಾದ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಏಕ ಕಡತದಲ್ಲಿ ಸಿಟಿಜನ್ ವೆಲ್‌ಫೇರ್ ಸೊಸೈಟಿ, ನಂ.3403, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿಜಯನಗರ, 2ನೇ ಹಂತ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, 4 ನೇ ವಲಯ, ಬೆಂಗಳೂರು ಇವರ ದಿನಾಂಕ: 06.01.25026ರ ಪತ್ರದಲ್ಲಿ ಸಂಘದ ಕಾರ್ಯಚಟುವಟಿಕೆ ಹಾಗೂ ಹಣ ದುರುಪಯೋಗದ ಬಗ್ಗೆ ಸ್ವೀಕೃತವಾಗಿದ್ದ ದೂರು ಅರ್ಜಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಕಲಂ-25 ರಡಿ ನೇಮಿಸಿದ್ದ ವಿಚಾರಣಾಧಿಕಾರಿಗಳು ಒಟ್ಟು 05 ವಿಚಾರಣಾ ಅಂಶಗಳ ಬಗ್ಗೆ ವಿಚಾರಣೆ ಜರುಗಿಸಿ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಸಂಘವು ನೋಂದಣಿಯಾದ ದಿನಾಂಕದಿಂದ ತಹಲ್‌ವರೆಗೂ ಅಂದರೆ ಸುಮಾರು 12 ವರ್ಷಗಳಿಂದ ಸಂಘದ ಆಯಾ ಸಾಲಿನ ವಾರ್ಷಿಕ ದಾಖಲಾತಿಗಳಾದ ಸರ್ವ ಸದಸ್ಯರ ಸಭೆಯ ನೋಟೀಸುಗಳನ್ನು, ನಡವಳಿಗಳನ್ನು, ಸರ್ವ ಸದಸ್ಯರ ಸಭೆಯ ಹಾಜರಾತಿ, ಕಾರ್ಯಕಾರಿ ಮಂಡಲಿ ಸದಸ್ಯರ ಪಟ್ಟಿ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರವಾದ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸದೇ, ಸಂಘದ ಉಪನಿಯಮದಂತೆ ಚುನಾವಣೆ ಹಾಗೂ ವಾರ್ಷಿಕ ಮಹಾಸಭೆಯನ್ನು ನಿಗದಿತ ಸಮಯದಲ್ಲಿ ನಡೆಸದೇ ಕಾಯ್ದೆಯ ಕಲಂ-11 ಮತ್ತು 13 ರ ಸ್ಪಷ್ಟ ಉಲ್ಲಂಘನೆ ಮಾಡಿರುವುದಾಗಿ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960 ರ ಕಲಂ-27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಬಂಧಕರನ್ನು ಕೋರಿರುತ್ತಾರೆ.

ಸಂಘದ ಹಿತದೃಷ್ಟಿಯಿಂದ ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರನ್ವಯ ಶ್ರೀ ಎನ್.ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲು ಮೇಲೆ ಓದಲಾದ ಏಕಕಡತದಲ್ಲಿ ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸಂಘವು ನೋಂದಣಿ ಆದಾಗಿನಿಂದ ಈವರೆವಿಗೂ ಸುಮಾರು 12 ವರ್ಷಗಳಿಂದ ಸಂಘದ ಆಯಾ ಸಾಲಿನ ವಾರ್ಷಿಕ ದಾಖಲಾತಿಗಳಾದ ಸರ್ವಸದಸ್ಯರ ಸಭೆಯ ನೋಟೀಸುಗಳನ್ನು, ಸರ್ವಸದಸ್ಯರ ನಡವಳಿಗಳನ್ನು, ಸರ್ವಸದಸ್ಯರ ಸಭೆಯ ಹಾಜರಾತಿಯನ್ನು, ಕಾರ್ಯಕಾರಿ ಮಂಡಳಿ ಸದಸ್ಯರ ಪಟ್ಟಿಯನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರವಾದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸದೇ, ಕರ್ನಾಟಕ ಸಂಘ ಸಂಸ್ಥೆಗಳ ಕಾಯ್ದೆ 1960ರ ಕಲಂ 11 ಮತ್ತು 13ನ್ನು ಹಾಗೂ ಸಂಘದ ಉಪ ನಿಯಮ ಸಂಖ್ಯೆ: 12 ಮತ್ತು 13ಗಳ ಸ್ಪಷ್ಟ ಉಲ್ಲಂಘನೆ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ, ಸಂಘದ ಉಪನಿಯಮ 6(ಅ) ರಂತೆ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸದಿರುವ ಕಾರಣ, ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ 1960 ಕಲಂ 11(1) ರಡಿಯ ಕಾನೂನಿನಂತೆ ಚುನಾಯಿತವಾದ ಕಾರ್ಯಕಾರಿ ಮಂಡಳಿಯು ಅಸ್ತಿತ್ವದಲ್ಲಿ ಇಲ್ಲದಿರುವುದು ಕಂಡು ಬಂದ ಹಿನ್ನೆಲೆಯಲ್ಲಿ, ಸಂಘದ ಹಿತದೃಷ್ಟಿಯಿಂದ ಸಿಟಿಜನ್ ವೆಲ್‌ಫೇರ್ ಸೊಸೈಟಿ, ನಂ.3403, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿಜಯನಗರ, 2ನೇ ಹಂತ, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ಬೈಲಾ ರೀತ್ಯ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ-1960ರ ಕಲಂ.27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 32 ಸಿಎಸ್‌ಆರ್ 2026
ಬೆಂಗಳೂರು, ದಿನಾಂಕ: 02ನೇ ಮಾರ್ಚ್ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಸಿಟಿಜನ್ ವೆಲ್‌ಫೇರ್ ಸೊಸೈಟಿ, ನಂ.3403, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿಜಯನಗರ, 2ನೇ ಹಂತ, ಬೆಂಗಳೂರು ಈ ಸಂಘಕ್ಕೆ ಶ್ರೀ ಎನ್.ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು, ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ -3
ಸಹಕಾರ ಇಲಾಖೆ.

PR-70

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳಿಗೆ 2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. 2025-26ನೇ ಸಾಲಿನ ಆಯವ್ಯಯ ಹಂಚಿಕೆ
2. ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಐಎಫ್1 2025, ದಿನಾಂಕ:22.04.2025
3. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025, ದಿನಾಂಕ: 02.06.2025
4. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025, ದಿನಾಂಕ: 26.08.2025
5. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025, ದಿನಾಂಕ: 22.12.2025
6. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2025, ದಿನಾಂಕ:01.01.2026
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಇಎಪಿ/09/2023-24, ದಿನಾಂಕ:09.02.2026

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ 2025-26ನೇ ಸಾಲಿನ ಆಯವ್ಯಯದಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ 2025-26ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾತಿಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ-5 ರಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ಕಾರ್ಯಕ್ರಮಗಳು ಒಳಗೊಂಡಿರುತ್ತವೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಎರಡನೇ ತ್ರೈಮಾಸಿಕ ಕಂತಿನ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಮೂರನೇ ತ್ರೈಮಾಸಿಕ ಕಂತಿನ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಅನುದಾನದಲ್ಲಿ ಜನವರಿ 2026 ರಿಂದ ಮಾರ್ಚ್ 2026 ರವರೆಗಿನ ನಾಲ್ಕನೇ ತ್ರೈಮಾಸಿಕ ಕಂತಿನ ಹಣ ಬಿಡುಗಡೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ಪತ್ರದಲ್ಲಿ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಆಂತರಿಕ ಆರ್ಥಿಕ ಸಲಹೆಗಾರರೊಂದಿಗೆ ಸಮಾಲೋಚಿಸಿ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025,
ಬೆಂಗಳೂರು, ದಿನಾಂಕ: 16ನೇ ಫೆಬ್ರವರಿ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ರೂ.200.00 ಲಕ್ಷಗಳ ಮೊತ್ತದಲ್ಲಿ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವಾಗಿ ರೂ.50.00 ಲಕ್ಷಗಳನ್ನು(ಐವತ್ತು ಲಕ್ಷಗಳು ಮಾತ್ರ) ಬಿಡುಗಡೆಗೊಳಿಸಿ, ಖಜಾನೆ-2 ರಿಂದ ಸೆಳೆದು ವೆಚ್ಚ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ(ಆಯವ್ಯಯ ಸೂಚನೆ) ಸಂಖ್ಯೆ: ಆಇ 51(ಟಿ) ವೆಚ್ಚ-1/2025, ದಿನಾಂಕ:09.04.2025 ರನ್ವಯ ಹಾಗೂ 2025-26ನೇ ಸಾಲಿನ ಕ್ರಿಯಾ ಯೋಜನೆಯನುಸಾರ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಕೆ ಮಾಡುವುದು.
2. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 34 ಟಿಎಆರ್ 2025, ದಿನಾಂಕ: 27.06.2025 ರಲ್ಲಿ ಸರ್ಕಾರದ ನಿಗಮ/ಮಂಡಳಿ/ಪ್ರಾಧಿಕಾರಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಬ್ಯಾಂಕ್ ವಹಿವಾಟುಗಳ ಅಂಕಿ-ಅಂಶಗಳನ್ನು ಆಂತರಿಕ ಆರ್ಥಿಕ ಸಲಹೆಗಾರರು ಪ್ರಮಾಣೀಕರಿಸಬೇಕಿರುತ್ತದೆ. ಆದ್ದರಿಂದ ಈ ಸಂಬಂಧ ಕ್ರಮವಹಿಸಲು ಮುಂದಿನ ಅನುದಾನ ಬಿಡುಗಡೆ ಸಂದರ್ಭದಲ್ಲಿ ಸಂಪೂರ್ಣ ವಿವರವನ್ನು (NTT module ನಲ್ಲಿ ಲಿಂಕ್ ಮಾಡಲಾದ ಬ್ಯಾಂಕ್ ಖಾತೆ ವಿವರ, ಖಾತೆಗಳಲ್ಲಿ ಲಭ್ಯವಿರುವ ಮೊತ್ತ, ಬಳಕೆ ಪ್ರಮಾಣ ಪತ್ರ, ಲೆಕ್ಕ ಸಮನ್ವಯದ ವಿವರ ಮತ್ತು ಇತರೆ ಅಗತ್ಯ ಮಾಹಿತಿ) ಒದಗಿಸುವುದು.
3. ಸಹಾಯಾನುದಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ-161 ರಲ್ಲಿ ಇಲಾಖಾ ಮುಖ್ಯಾಧಿಕಾರಿಗಳಿಗೆ ನೀಡಲಾದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. 2025-26ನೇ ಸಾಲಿನ ಲೆಕ್ಕಶೀರ್ಷಿಕೆ:2852-08-201-0-09-059ರಡಿ ಬಿಡುಗಡೆ ಮಾಡಲಾದ ಅನುದಾನವನ್ನು ವೆಚ್ಚ ಮಾಡಿರುವ ಕುರಿತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 161(b)(5) ರಡಿಯಲ್ಲಿ ಸೂಚಿಸಿರುವ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
5. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2025, ದಿನಾಂಕ:01.01.2026 ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2025, ದಿನಾಂಕ:01.01.2026 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಸಿಐ 62 ಐ.ಎಫ್.1 2025, ದಿನಾಂಕ:11.02.2026 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-71

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಕ್ಕೆ ಪಾವತಿಸಬೇಕಾಗಿರುವ ವಿದ್ಯುತ್ ಬಿಲ್ಲಿನ ಬಾಬ್ತು 3 ಮತ್ತು 4ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ದಿನಾಂಕ:13.12.2024ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ (9) ರಲ್ಲಿ {ಸಿ.692/2024} ನೀಡಿರುವ ಅನುಮೋದನೆ.
2. ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2024, ದಿನಾಂಕ:20.05.2025
3. ಸರ್ಕಾರದ ಆದೇಶ ಸಂಖ್ಯೆ: ಸಿಐ 2025 ಸಿಓಎಫ್ 2024, ದಿನಾಂಕ:18.08.2025
4. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರ ಪತ್ರ ಸಂಖ್ಯೆ:ಸೆಸ್ಕ್/ಕಂದಾಯ/01/E-70698/ 2025-26/30810-12, ದಿನಾಂಕ:23.12.2025
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 305 Exp-1/2024, Dated:28.01.2026

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಸಚಿವ ಸಂಪುಟ ಸಭೆಯು 'ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಪಾವತಿಸಲು ಬಾಕಿ ಇರುವ ವಿದ್ಯುತ್ ಬಿಲ್ಲಿನ ಅಸಲು ಮೊತ್ತ ರೂ.37,74,95,141.00 ಗಳಲ್ಲಿ ಶೇಕಡಾ 50ರಷ್ಟನ್ನು ಪಾವತಿಸಲು ಹಾಗೂ ಅಸಲಿನ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು ತೀರ್ಮಾನಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ಮತ್ತು (3)ರರ ಆದೇಶಗಳಲ್ಲಿ, ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಪಾವತಿಸಲು ಬಾಕಿ ಇರುವ ವಿದ್ಯುತ್ ಬಿಲ್ಲಿನ ಅಸಲು ಮೊತ್ತ ರೂ.37,74,95,141.00 ಗಳಲ್ಲಿ ಶೇಕಡಾ 50ರಷ್ಟನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:6860-04-190-2-01-394– ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು – ರಡಿಯಲ್ಲಿ ಹಂಚಿಕೆ ಮಾಡಿರುವ ರೂ.1888.00 ಲಕ್ಷಗಳ ಮೊತ್ತದಲ್ಲಿ, ಮೊದಲ ಮತ್ತು ಎರಡನೇ ಕಂತಿನ ಅನುದಾನವಾಗಿ ರೂ.944.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಪತ್ರದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2025, ದಿನಾಂಕ:20.05.2025ರಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್ ರವರು ಉತ್ಪಾದಿಸಿದ ವಿದ್ಯುತ್ ಉತ್ಪಾದನೆ ವೆಚ್ಚಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದ್ದು ಹೊಂದಾಣಿಕೆ ಮೂಲಕ ರೂ.18.87 ಕೋಟಿಯನ್ನು ಸದರಿಯವರಿಗೆ ಪಾವತಿಸಬೇಕಾಗಿರುವ ವಿದ್ಯುತ್ ಖರೀದಿ ವೆಚ್ಚದಲ್ಲಿ ಹೊಂದಾಣಿಕೆ ಮಾಡಬೇಕಾಗಿದ್ದು, ದಿ ಮೈಸೂರು ಷುಗರ್ ಕಂಪನಿಯು ಜನವರಿ 2025 ರಿಂದ ಇಲ್ಲಿಯವರೆವಿಗೂ ವಿದ್ಯುತ್ ಉತ್ಪಾದನೆ ಮಾಡದೇ ಇರುವುದರಿಂದ ಸರ್ಕಾರದ ಆದೇಶದಂತೆ ರೂ.18.87 ಕೋಟಿಯನ್ನು ಹೊಂದಾಣಿಕೆ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಸದರಿ ಸಂಸ್ಥೆಯ ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆಯ ಬಗ್ಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಮಾಹಿತಿ ಲಭ್ಯವಿರುವುದಿಲ್ಲವಾದ್ದರಿಂದ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್‌ನಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ವಿದ್ಯುತ್ ಉತ್ಪಾದನೆಯ ಹೊಂದಾಣಿಕೆ ಮೂಲಕ ಪಾವತಿಸಲು ಉಳಿದಿರುವ ಬಾಕಿ ಮೊತ್ತ ರೂ.18.87 ಕೋಟಿಗಳ ಜೊತೆಗೆ ಪ್ರಸ್ತುತ ಪಾವತಿಸಲು ಬಾಕಿ ಉಳಿದಿರುವ 02 ಕಂತುಗಳ ಮೊತ್ತ ರೂ.9.44 ಕೋಟಿ ಒಟ್ಟು ರೂ.28.32 ಕೋಟಿಗಳನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಒಂದೇ ಕಂತಿನಲ್ಲಿ ಬಿಡುಗಡೆಗೊಳಿಸಲು ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯ ಕುರಿತು ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಹಿಂಬರಹದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:6860-04-190-2-01-394–ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು" ರಡಿಯಲ್ಲಿ

ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವಾಗಿ ರೂ.940.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2024,
ಬೆಂಗಳೂರು, ದಿನಾಂಕ: 6ನೇ ಫೆಬ್ರುವರಿ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಪಾವತಿಸಲು ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:6860-04-190-2-01-394–ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು – ರಡಿಯಲ್ಲಿ ಹಂಚಿಕೆ ಮಾಡಿರುವ ರೂ.1888.00 ಲಕ್ಷಗಳ ಮೊತ್ತದಲ್ಲಿ, ಮೂರನೇ ಮತ್ತು ನಾಲ್ಕನೇ ಕಂತಿನ ಅನುದಾನವಾಗಿ ರೂ.940.00 ಲಕ್ಷಗಳನ್ನು (ಒಂಬೈನೂರ ನಲವತ್ತು ಲಕ್ಷ ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತುಗೊಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ.

1. ಮೇಲ್ಕಂಡ ರೂ.940.00 ಲಕ್ಷಗಳನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಖಜಾನೆ-2 ಲಾಗಿನ್ ಗೆ ಬಿಡುಗಡೆಗೊಳಿಸಲಾಗಿರುತ್ತದೆ. ಸದರಿ ರೂ.940.00 ಲಕ್ಷಗಳನ್ನು {ಲೆಕ್ಕಶೀರ್ಷಿಕೆ:6860-04-190-2-01-394- ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು} ಮುಂದಿನ ಅಗತ್ಯ ಕ್ರಮಕ್ಕಾಗಿ ಜಂಟಿ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇ.ಎಂ), ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರ ಖಜಾನೆ-2 ರ ಲಾಗಿನ್‌ಗೆ ವರ್ಗಾಯಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ನಿಯಮಾನುಸಾರ ಅಗತ್ಯಕ್ರಮವಹಿಸತಕ್ಕದ್ದು.
2. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ರೂ.940.00 ಲಕ್ಷಗಳ ಮೊತ್ತವನ್ನು ಖಜಾನೆಯಿಂದ ಸೆಳೆಯಲು ಜಂಟಿ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇ.ಎಂ), ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರು ಹಣ ಸೆಳೆಯುವ ಅಧಿಕಾರಿಯಾಗಿರುತ್ತಾರೆ. ಸದರಿಯವರು ಹಣ ಸೆಳೆಯುವ ಬಿಲ್‌ನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸತಕ್ಕದ್ದು.
3. ಸದರಿ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಸಕ್ಕರೆ ನಗರ, ಮಂಡ್ಯ ಇವರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಕೂಡಲೇ ಪಾವತಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಮುಂದುವರೆದು, ಸಹ-ವಿದ್ಯುತ್ ಘಟಕದ ಮೂಲಕ ಬಾಕಿ ಇರುವ ಬಿಲ್ಲಿನ ಮೊತ್ತದಲ್ಲಿ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ಎಂಬ ಬಗ್ಗೆ ಪುಸ್ತಕ ಹೊಂದಾಣಿಕೆಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

4. ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2024, ದಿನಾಂಕ:20.05.2025ರಲ್ಲಿರುವ ಇತರ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 305 Exp-1/2024, Dated: 28.01.2026ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-72

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳಲ್ಲಿ 2024-25ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ದಿನಾಂಕವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ :
1. ಉಪಾಧ್ಯಕ್ಷರು, ಸಿಸ್ಮಾ, ಕರ್ನಾಟಕ ಇವರ ದಿನಾಂಕ:07.08.2024ರ ಪತ್ರ.
2. ದಿನಾಂಕ:07.08.2024ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ಕರ್ನಾಟಕ ಇದರ ಪದಾಧಿಕಾರಿಗಳೊಂದಿಗೆ ನಡೆದ ಸಭಾ ನಡವಳಿ.
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎಸ್‌ಕೆ/ಸಿಸ್ಮಾ/2024-25/897, ದಿನಾಂಕ:13.08.2024.

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ, ಹಿಂದಿನ ವರ್ಷದ ಬರಗಾಲದ ಪ್ರಯುಕ್ತ, ರೈತರು ತಡವಾಗಿ ಕಬ್ಬು ನಾಟಿ ಮಾಡಿರುವುದರಿಂದ ಪಕ್ವವಾದ ಕಬ್ಬು ಎಲ್ಲಿಯೂ ಇರುವುದಿಲ್ಲವಾದ್ದರಿಂದ ಡಿಸೆಂಬರ್ 2024 ರಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸುವುದು ಎಲ್ಲಾ ದೃಷ್ಟಿಯಿಂದ ಅನುಕೂಲ, ರೈತರಿಗೂ ಎಕರೆಗೆ ಹೆಚ್ಚಿನ ಇಳುವರಿ ದೊರೆತು ಆರ್ಥಿಕವಾಗಿ ಲಾಭವಾಗುತ್ತದೆ ಎಂದು ಹಾಗೂ ಕಾರ್ಖಾನೆಗೂ ಸರಿದೂಗುವ ರಿಕವರಿ ಸಿಗುವಂತೆ ಆಗುತ್ತದೆ ಎಂದು, ಬೇಗನೆ ಕಾರ್ಖಾನೆಗಳನ್ನು ಪ್ರಾರಂಭಿಸಿದರೆ ರೈತರಿಗೆ, ಕಾರ್ಖಾನೆಗಳಿಗೆ ಹಾಗೂ ಸರ್ಕಾರಕ್ಕೆ ಬಹಳ ನಷ್ಟ ಉಂಟಾಗುವುದರಿಂದ, ಯಾವುದೇ ಪರಿಸ್ಥಿತಿಯಲ್ಲಿ 2024-25ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು 15ನೇ ನವೆಂಬರ್ ಗಿಂತ ಮೊದಲು ಪ್ರಾರಂಭ ಮಾಡಲೇಬಾರದೆಂದು ಆದೇಶವನ್ನು ಹೊರಡಿಸುವಂತೆ ಉಪಾಧ್ಯಕ್ಷರು, ಸಿಸ್ಮಾ, ಕರ್ನಾಟಕ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸಭಾ ನಡವಳಿಯಲ್ಲಿ, ಸಾಮಾನ್ಯವಾಗಿ ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳು ಅಕ್ಟೋಬರ್-ನವೆಂಬರ್ ಮಾಹೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು ವಾಡಿಕೆಯಾಗಿರುತ್ತದೆ. ಕೆಲವೊಂದು ಕಾರ್ಖಾನೆಗಳು ಸ್ಪರ್ಧೆಗಿಳಿದು ಹಂಗಾಮನ್ನು ಬೇಗನೆ ಪ್ರಾರಂಭ ಮಾಡುವುದರಿಂದ ಕಬ್ಬು ಸಂಪೂರ್ಣ ಪಕ್ವವಾಗದೇ ಇರುವುದರಿಂದ ಇಳುವರಿ ಕಡಿಮೆ ಆಗುತ್ತದೆ. ಇದು ಸಕ್ಕರೆ ಮತ್ತು ಇತರೆ ಉಪ ಉತ್ಪನ್ನಗಳ ಒಟ್ಟಾರೆ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ. ಕಬ್ಬು ಅರೆಯುವ ಕಾರ್ಯವನ್ನು ಬೇಗನೆ ಪ್ರಾರಂಭಿಸುವ ಸಕ್ಕರೆ ಕಾರ್ಖಾನೆಯ ನೆರೆಯ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬೆಳೆದಂತಹ ಮತ್ತು ಕಾನೂನುಬಾಹಿರವಾಗಿ ಸಾಗಾಣಿಕೆ ಮಾಡಿ ಕಬ್ಬನ್ನು ಅನಧಿಕೃತವಾಗಿ ನುರಿಸುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಸಕ್ಕರೆ ಕಾರ್ಖಾನೆಗಳ ಮಧ್ಯೆ ಅನಾರೋಗ್ಯಕರ ಸ್ಪರ್ಧೆ ಮತ್ತು ಕಾನೂನಾತ್ಮಕ ತೊಡಕುಗಳು ಉಂಟಾಗುತ್ತವೆ. ಆದ್ದರಿಂದ, ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು 2024ನೇ ಸಾಲಿನ ನವೆಂಬರ್-15ರ ನಂತರ ಪ್ರಾರಂಭಿಸುವಂತೆ ನಿರ್ದೇಶನವನ್ನು ನೀಡಲು ನಿರ್ಣಯಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ, ದಿನಾಂಕ:07.08.2024ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ಕರ್ನಾಟಕ ಇದರ ಪದಾಧಿಕಾರಿಗಳೊಂದಿಗೆ ನಡೆದ ಸಭಾ ನಡವಳಿಯಲ್ಲಿ ನಿರ್ಣಯಿಸಿರುವಂತೆ, ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು 2024ನೇ ಸಾಲಿನ ನವೆಂಬರ್-15ರ ನಂತರ ಪ್ರಾರಂಭಿಸುವಂತೆ ಸರ್ಕಾರದಿಂದ ಸೂಕ್ತ ಆದೇಶವನ್ನು ಹೊರಡಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 233 ಎಸ್‌ಜಿಎಫ್ 2024, ಬೆಂಗಳೂರು, ದಿನಾಂಕ:13ನೇ ಸೆಪ್ಟೆಂಬರ್ 2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದ ರೈತರ ಮತ್ತು ಸಕ್ಕರೆ ಕಾರ್ಖಾನೆಗಳ ಹಿತದೃಷ್ಟಿಯಿಂದ ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಕಡ್ಡಾಯವಾಗಿ 2024ನೇ ಸಾಲಿನ ನವೆಂಬರ್-15ರ ನಂತರ

ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ. ಈ ಆದೇಶವನ್ನು ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ಆದೇಶವನ್ನು ಉಲ್ಲಂಘಿಸಿದ ಸಕ್ಕರೆ ಕಾರ್ಖಾನೆಗಳ ಕುರಿತು ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ವರದಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-73

ಕರ್ನಾಟಕ ಸರ್ಕಾರದ ನಡವಳಿಗಳು

ಸಂಖ್ಯೆ: ಸಿಐ 80 ಸಿಓಎಫ್ 2025 ಕರ್ನಾಟಕ ಸರ್ಕಾರ ಸಚಿವಾಲಯ
ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ವಿಕಾಸಸೌಧ
ಬೆಂಗಳೂರು, ದಿನಾಂಕ:27.01.2026

ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025, ದಿನಾಂಕ:14.01.2026ರಲ್ಲಿನ " ಸಮಿತಿಯ ಕ್ರಮ ಸಂಖ್ಯೆ (5) ರಲ್ಲಿನ **"** ಶ್ರೀ ಸಿ.ಬಿ.ಪಾಟೀಲ, ತಾಂತ್ರಿಕ ಸಲಹೆಗಾರರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ - ಸದಸ್ಯರು **ಎಂಬುದರ ಬದಲಿಗೆ** "ಶ್ರೀ ಸಿ.ಬಿ.ಪಾಟೀಲ, ತಾಂತ್ರಿಕ ಸಲಹೆಗಾರರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ - ಸದಸ್ಯ ಕಾರ್ಯದರ್ಶಿ ಎಂದು ಹಾಗೂ ಹಾಗೂ ಆದೇಶದ ಸಂಖ್ಯೆಯನ್ನು "ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಎಸ್‌ಜಿಎಫ್ 2025" ಎಂಬುದರ ಬದಲಿಗೆ "ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

PR-74

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ ಮತ್ತು ಅಕ್ರಮ ನೇಮಕಾತಿಗಳು ಹಾಗೂ ಕಂಪನಿಗೆ ಉಂಟಾಗಿದೆ ಎನ್ನಲಾದ ಆರ್ಥಿಕ ನಷ್ಟದ ಕುರಿತು ತನಿಖೆಯನ್ನು ನಡೆಸುವ ಬಗ್ಗೆ.

ಓದಲಾಗಿದೆ :
1. ಶ್ರೀ ಕೆ.ಎಂ.ಮಂಜುನಾಥ್, ಕಾಳೇಗೌಡನ ಕೊಪ್ಪಲು, ಪಾಂಡವಪುರ ತಾಲ್ಲೂಕು ಇವರ ಇವರು ಸರ್ಕಾರಕ್ಕೆ ಸಲ್ಲಿಸಿದ ಪತ್ರಗಳು (ಸ್ವೀಕೃತವಾದ ದಿನಾಂಕ:21.12.2023 & 11.01.2023)
2. ಶ್ರೀ ಪುಟ್ಟಸ್ವಾಮಿಗೌಡ ಬಿನ್ ಲೇಟ್ ಚನ್ನಯ್ಯ, ಕಾಗೆಹಳ್ಳದದೊಡ್ಡಿ ಗ್ರಾಮ, ಕಸಬಾ ಹೋಬಳಿ, ಮಂಡ್ಯ ತಾಲ್ಲೂಕು ಇವರು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ:08.09.2023, 25.03.2024, 30.05.2024, 05.06.2024, 08.06.2024 (ಎರಡು ಪತ್ರಗಳು) 12.07.2024, 19.08.2024, 29.04.2024, 19.12.2023, 28.02.2024, 07.07.2023, 28.02.2022, 21.12.2024,
3. ಶ್ರೀ ಎಂ.ಎನ್.ಚಂದ್ರ ಬಿನ್ ಲೇ॥ ನಿಂಗಯ್ಯ, ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿದ

ಪತ್ರಗಳು (ಸ್ವೀಕೃತವಾದ ದಿನಾಂಕ:14.05.2023, 13.05.2024 11.06.2024 & 15.06.2024) ದಿನಾಂಕ:13.06.2024, 13.09.2024, 24.12.2024, 29.04.2024

4. ಶ್ರೀ ಚಂದ್ರಶೇಖರ್ ಹೆಚ್ ಮತ್ತಿತರರು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ:04.07.2025ರ ಪತ್ರ.
5. ಶ್ರೀ ಶಿವಶಂಕರ್ ಎಂ. ಮದ್ದೂರು ಇವರು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ:28.05.2025
6. ಶ್ರೀ ಬೋರೇಗೌಡ ಮತ್ತು ಇತರರು (ರೈತ ಮುಖಂಡರು) ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ:25.04.2025ರ ಪತ್ರ
7. ಶ್ರೀ ಶಿವಕುಮಾರ್ ಕೆ. ಬಿನ್ ಕೆ.ಸಿ ಕೆಂಪಯ್ಯ ಮಂಡ್ಯ ಮಾಜಿ ನಗರ ಸಭಾ ಸದಸ್ಯರು, ಮಂಡ್ಯ ನಗರ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳು ಮಂಡ್ಯ ನಗರ ಘಟಕ, ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ:19.04.2025, 04.07.2025, 24.07.2025, 06.08.2025, 12.08.2025, 22.08.2025, 22.09.2025, 14.09.2025, 12.11.2025, 15.11.2025, 20.01.2025
8. ನಿವೃತ್ತ ನೌಕರರು, ದಿ ಮೈಸೂರು ಷುಗರ್ ಕಂಪನಿ ಲಿ ಇವರು ಸರ್ಕಾರಕ್ಕೆ ಸಲ್ಲಿಸಿದ ಮನವಿ (ಸ್ವೀಕೃತವಾದ ದಿನಾಂಕ:04.11.2025)
9. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಮಂಡ್ಯ ಇವರ ಪತ್ರ ಸಂಖ್ಯೆ: MDC/ DEV/ MSc2/79/2025-DEVSEC-DC MANDYA, ದಿನಾಂಕ:13.02.2025
10. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:ಎಂ.ಎಸ್.ಕೋ/ಎಂ.ಡಿ/ಬಿ.ಎಲ್.ಆರ್/68/2023-24, ದಿನಾಂಕ: 18.08.2023,12.01.2024, 15.02.2024, 06.03.2024 & 15.03.2024
11. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಸಿಓಎಫ್/22/2024-25, ದಿನಾಂಕ:11.07.2025, 19.08.2025, 20.08.2025
12. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:ಎಂ.ಎಸ್.ಕೋ/ಎಂ.ಡಿ/2025-26/101, ದಿನಾಂಕ:30.08.2025

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (8) ರವರೆಗಿನ ಪತ್ರಗಳಲ್ಲಿ, ಶ್ರೀ ಅಪ್ಪಾ ಸಾಹೇಬ್ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ರವಿಕುಮಾರ್ ಎಂ.ಆರ್., ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಹೆಚ್.ಎಲ್ ನಾಗರಾಜು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀ ಮಂಗಲ್‌ದಾಸ್‌ರವರು, ಶ್ರೀ ಅಪ್ಪಾ ಸಾಹೇಬ ಪಾಟೀಲ, ವ್ಯವಸ್ಥಾಪಕರು (ತಾಂತ್ರಿಕ), ಶ್ರೀ ಚಂದ್ರಶೇಖರ್, ಕಬ್ಬು ಅಭಿವೃದ್ಧಿ ಅಧಿಕಾರಿ, ಶ್ರೀಮತಿ ತೇಜಸ್ವಿನಿ., ಸಿಬ್ಬಂದಿ ಅಧಿಕಾರಿ, ಶ್ರೀ ರಮೇಶ್ ಚೆಲ್ಲಾಪುರ್ ಸಿಬ್ಬಂದಿ ಅಧಿಕಾರಿ ಇವರುಗಳು ಅವರುಗಳ ಅಧಿಕಾರಾವಧಿಗಳಲ್ಲಿ ಪ್ರಮುಖವಾಗಿ ಕ್ಷೇತ್ರ ಸಹಾಯಕ ಆಯ್ಕೆ, ಕಬ್ಬು ಕಟಾವು ಮುಂಗಡ ಪಾವತಿ, ಕಬ್ಬು ಕಟಾವು ಮತ್ತು ಸಾಗಣೆ, ಕಬ್ಬಿನ ತೂಕ ಮತ್ತು ಹಣ ಪಾವತಿ, ಹೊರಗುತ್ತಿಗೆ ನೌಕರರ ನೇಮಕಾತಿ, ಸಕ್ಕರೆ ಮಾರಾಟ, ಕಾರ್ಖಾನೆಯ ಆವರಣದಲ್ಲಿನ ಮರಗಳ ಕಟಾವು, ಕಾಮಗಾರಿಗಳ ನಿರ್ವಹಣೆ, ನಿವೃತ್ತ ಮತ್ತು ಸ್ವಯಂ ನಿವೃತ್ತಿ ಪಡೆದ ನೌಕರರ ನೇಮಕ, ಕರ್ತವ್ಯ ನಿರ್ಲಕ್ಷತೆ, ಕಂಪನಿಯ ಖಾಲಿ ಜಾಗದ ಗುತ್ತಿಗೆಯಂತಹ ನಿಯಯಬಾಹಿರ ಚಟುವಟಿಕೆಗಳಿಂದಾಗಿ ಕಂಪನಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದ್ದು, ಸದರಿ ಆರೋಪಗಳ ಕುರಿತು ಮತ್ತು ನಿಯಮಬಾಹಿರವಾಗಿ ಸಭಾ ನಡವಳಿಗೆ ಸಹಿ ಮಾಡಿರುವುದು ಮತ್ತು ನಿಯಮಬಾಹಿರವಾಗಿ ತನಿಖಾ ಸಮಿತಿಯನ್ನು ರಚಿಸಿರುವ ಆರೋಪಗಳ ಕುರಿತು ತನಿಖೆಯನ್ನು ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಂಡು ಕಂಪನಿಗೆ ಆದ ನಷ್ಟವನ್ನು ವಸೂಲು ಮಾಡುವಂತೆ ಕೋರಿ ಸರ್ಕಾರಕ್ಕೆ ದೂರುಗಳನ್ನು ಸಲ್ಲಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಪತ್ರದಲ್ಲಿ, ಶ್ರೀ ಅಪ್ಪಾಸಾಹೇಬ್ ಚನ್ನೇಗೌಡ ಪಾಟೀಲ್ ಇವರು ದಿ ಮೈಸೂರು ಷುಗರ್ ಕಂಪನಿಯಲ್ಲಿ ಭಾರಿ ಗಾತ್ರದ ಮರಗಳನ್ನು ಕಡಿದು ವಿಲೇವಾರಿ ಮಾಡಿದ್ದು ಸದರಿಯವರನ್ನು ಅಮಾನತ್ತಿನಲ್ಲಿರಿಸಲು ಶ್ರೀ ಶಿವಕುಮಾರ್ ಇವರು ಮನವಿ

ಸಲ್ಲಿಸಿದ್ದು ಸದರಿ ಮನವಿಯ ಕುರಿತು ಸೂಕ್ತ ತನಿಖೆಯನ್ನು ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(10)ರ ಪತ್ರಗಳಲ್ಲಿ, ಶ್ರೀ ಅಪ್ಪಾ ಸಾಹೇಬ್ ಪಾಟೀಲ್, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಇವರ ಕರ್ತವ್ಯ ನಿರ್ಲಕ್ಷತೆಯಿಂದ ದಿ ಮೈಸೂರು ಷುಗರ್ ಕಂಪನಿಗೆ 2022-23ನೇ ಸಾಲಿನಲ್ಲಿ ನಷ್ಟ ಉಂಟಾಗಿದ್ದು, ಶ್ರೀ ಅಪ್ಪಾ ಸಾಹೇಬ್ ಪಾಟೀಲ್ ಮತ್ತು ತಾಂತ್ರಿಕವಾಗಿ ಸಹಕರಿಸಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು, ಸದರಿಯವರನ್ನು ಕಂಪನಿಯ ಸೇವೆಯಿಂದ ಬಿಡುಗಡೆಗೊಳಿಸಲು ಮತ್ತು ಅವರಿಂದ ನಷ್ಟವನ್ನು ವಸೂಲು ಮಾಡಲು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(11)ರ ಪತ್ರಗಳಲ್ಲಿ ದಿ ಮೈಸೂರು ಷುಗರ್ ಕಂಪನಿಯಲ್ಲಿ ಸರ್ಕಾರದ ಮೀಸಲಾತಿ ನೀತಿಯನ್ನು ಮತ್ತು ನಿರ್ದೇಶನಗಳನ್ನು ಉಲ್ಲಂಘಿಸಿ ಸ್ವಯಂ ನಿವೃತ್ತಿ ಪಡೆದ ಮತ್ತು ನಿವೃತ್ತಿ ಹೊಂದಿದವರನ್ನು ಮರು ನೇಮಕ ಮಾಡಿದ್ದು, ಸದರಿ ನೌಕರರನ್ನು ವಜಾಗೊಳಿಸಲು ಹಾಗೂ ಕಂಪನಿಯಲ್ಲಿ ಭ್ರಷ್ಟಾಚಾರ ಮಾಡಿರುವ ಶ್ರೀ ಅಪ್ಪಾ ಸಾಹೇಬ್ ಪಾಟೀಲ್ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಸದರಿಯವರನ್ನು ವಜಾಗೊಳಿಸಲು ಕೋರಿರುವ ದೂರು / ಮನವಿಗಳ ಕುರಿತು ಸೂಕ್ತ ಕ್ರಮ ಕೈಗೊಂಡು ತನಿಖೆಗೆ ಆದೇಶ ಹೊರಡಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (12)ರ ಪತ್ರದಲ್ಲಿ, ಶ್ರೀ ಅಪ್ಪಾ ಸಾಹೇಬ್ ಪಾಟೀಲ್ ಇವರ ವಿರುದ್ಧದ ಆರೋಪಗಳ ಕುರಿತು ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚೆಯಾಗಿದ್ದು, ಏಕ ಸದಸ್ಯ ನಿವೃತ್ತ ನ್ಯಾಯಾಧೀಶರ ಆಯೋಗವನ್ನು ನೇಮಿಸಿ ಅವರಿಂದ ವರದಿ ಪಡೆಯುವ ಸಂಬಂಧ ನಿರ್ಣಯವಾಗಿದ್ದು, ವರದಿ ಬಂದ ನಂತರ ಸರ್ಕಾರದ ಗಮನಕ್ಕೆ ತರಲಾಗುವುದೆಂದು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ವರದಿ ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (12)ರವರೆಗಿನ ದೂರು ಮತ್ತು ಪತ್ರಗಳಲ್ಲಿ ಪ್ರಮುಖವಾಗಿ ಈ ಕೆಳಕಂಡ ವಿಷಯಗಳ ಕುರಿತು ಆರೋಪಗಳನ್ನು ಮಾಡಲಾಗಿರುತ್ತದೆ.

1. ಕಬ್ಬು ಕಟಾವು ಮುಂಗಡ ಪಾವತಿ, ಕಬ್ಬು ಕಟಾವು ಮತ್ತು ಸಾಗಣೆ, ಕಬ್ಬಿನ ತೂಕ ಮತ್ತು ಹಣ ಪಾವತಿಯಲ್ಲಿ ಅಕ್ರಮವೆಸಗಿ ಕಂಪನಿಗೆ ನಷ್ಟ ಉಂಟು ಮಾಡಿರುವ ಬಗ್ಗೆ
2. ದಿ ಮೈಸೂರು ಷುಗರ್ ಕಂಪನಿಯಲ್ಲಿನ ಗುತ್ತಿಗೆ ಮತ್ತು ಹೊರಗುತ್ತಿಗೆ ನೇಮಕಾತಿಯಲ್ಲಿ ನಡೆದಿವೆ ಎನ್ನಲಾದ ಅಕ್ರಮ ನೇಮಕಾತಿಗಳ ಬಗ್ಗೆ.
3. ದಿ ಮೈಸೂರು ಷುಗರ್ ಕಂಪನಿಯಲ್ಲಿನ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ.
4. 2023-24ನೇ ಸಾಲಿನಲ್ಲಿ ದಿ ಮೈಸೂರು ಷುಗರ್ ಕಂಪನಿಯಲ್ಲಿನ ಸಕ್ಕರೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿರುವ ದೂರಿನ ಬಗ್ಗೆ.
5. ಕೋಣನಹಳ್ಳಿ ಕೆರೆಯಿಂದ ಮೈಷುಗರ್ ಕಂಪನಿಗೆ ನೀರು ಸರಬರಾಜು ಮಾಡಲು ಪೈಪ್‌ಲೈನ್ ಅಳವಡಿಸಿರುವ ಕಾಮಗಾರಿಯಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ.
6. ಮೈಸೂರು ಷುಗರ್ ಕಂಪನಿಯ ಜಾಗವನ್ನು ಅಕ್ರಮವಾಗಿ ಗುತ್ತಿಗೆ ನೀಡಿ ಕಂಪನಿಗೆ ತುಂಬಲಾರದ ನಷ್ಟವನ್ನು ಉಂಟು ಮಾಡಿರುವ ಬಗ್ಗೆ.
7. ದಿ ಮೈಸೂರು ಷುಗರ್ ಕಂಪನಿಯಲ್ಲಿ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ನಿವೃತ್ತ ನೌಕರರನ್ನು ಪುನರ್ ನೇಮಕ ಮಾಡಿಕೊಂಡಿರುವ ಬಗ್ಗೆ.
8. ನಿಯಮಬಾಹಿರವಾಗಿ ಸತ್ಯ ಶೋಧನಾ ಸಮಿತಿಯನ್ನು ನೇಮಿಸಿರುವ ಬಗ್ಗೆ.

9. ಕಂಪನಿಯಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ ಮತ್ತು ನಿಯಮಬಾಹಿರ ಚಟುವಟಿಕೆಗಳಿಂದ ಕಂಪನಿಗೆ ನಷ್ಟ ಉಂಟಾಗಿರುವ ಆರೋಪಗಳ ಬಗ್ಗೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರಗಳು, ನಿಯಬಾಹಿರ ಚಟುವಟಿಕೆಗಳು, ಅಕ್ರಮ ನೇಮಕಾತಿಗಳು ಮತ್ತು ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟದ ಕುರಿತಂತೆ ಸಮಗ್ರವಾಗಿ ತನಿಖೆಯನ್ನು ನಡೆಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಎಸ್‌ಜಿಎಫ್ 2025,
ಬೆಂಗಳೂರು, ದಿನಾಂಕ: 14 ನೇ ಜನವರಿ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ 2021-22ನೇ ಸಾಲಿನಿಂದ ಈವರೆಗೆ ನಡೆದಿವೆ ಎನ್ನಲಾದ ಅವ್ಯವಹಾರಗಳು ಮತ್ತು ನಿಯಮಬಾಹಿರ ಚಟುವಟಿಕೆಗಳು, ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ದೂರುಗಳ ಕುರಿತು ಪರಿಶೀಲಿಸಿ ವರದಿ ನೀಡಲು ಈ ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಕ್ರ.ಸಂ	ಹೆಸರು ಮತ್ತು ಪದನಾಮ	ಹುದ್ದೆ
1.	ಶ್ರೀ ಶೇಖರ್ ಗಾಯಕವಾಡ, ಭಾ.ಆ.ಸೇ (ನಿವೃತ್ತ) ಹಾಗೂ ನಿವೃತ್ತ ಸಕ್ಕರೆ ಆಯುಕ್ತರು, ಮಹಾರಾಷ್ಟ್ರ	ಅಧ್ಯಕ್ಷರು
2.	ಶ್ರೀ ರಾಜೇಂದ್ರ ಚಾಂದಗುಡೆ, ಮುಖ್ಯಸ್ಥರು, ಶುಗರ್ಸ್ ಎಂಜಿನಿಯರಿಂಗ್ & ರಿನಿವೇಬಲ್ ಎನರ್ಜಿ ಡಿಪಾರ್ಟ್‌ಮೆಂಟ್, ವಸಂತದಾದಾ ಶುಗರ್ ಇನ್ಸ್‌ಟಿಟ್ಯೂಟ್, ಪುಣೆ, ಮಹಾರಾಷ್ಟ್ರ	ಸದಸ್ಯರು
3.	ಶ್ರೀ ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಮೈಸೂರು	ಸದಸ್ಯರು
4.	ಶ್ರೀ ಬಿ.ಎಸ್.ರಾಜಗೋಪಾಲ್, ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	ಸದಸ್ಯರು
5.	ಶ್ರೀ ಸಿ.ಬಿ.ಪಾಟೀಲ, ತಾಂತ್ರಿಕ ಸಲಹೆಗಾರರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	ಸದಸ್ಯರು
6.	ಶ್ರೀ ಮುಜಾವರ ಬಹದೂರಲಿ ಇಬ್ರಾಹಿಂ ಲಾತೂರು.	ಸದಸ್ಯರು

1. ಮೇಲ್ಕಂಡ ಸಮಿತಿಯು ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಗೆ ಭೇಟಿ ನೀಡಿ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿರುವ ಪ್ರತಿಯೊಂದು ದೂರುಗಳ ಕುರಿತು ಪರಿಶೀಲನೆಯನ್ನು ನಡೆಸಿ 15 ದಿನಗಳ ಒಳಗಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.
2. ಮೇಲ್ಕಂಡ ಸಮಿತಿಗೆ ಅಗತ್ಯ ದಾಖಲೆಗಳನ್ನು / ಮಾಹಿತಿಗಳನ್ನು ಸ್ಥಳಾವಕಾಶ ಹಾಗೂ ಅಗತ್ಯ ಸಿಬ್ಬಂದಿಯನ್ನು ಒದಗಿಸಲು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
3. ಮೇಲ್ಕಂಡ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಪ್ರಯಾಣಕ್ಕೆ ಹಾಗೂ ವಸತಿಗೆ ಕಂಪನಿಯಿಂದ ಅಗತ್ಯ ವ್ಯವಸ್ಥೆಗಳನ್ನು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

PR-75

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳಿಗೆ 2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. 2025-26ನೇ ಸಾಲಿನ ಆಯವ್ಯಯ ಹಂಚಿಕೆ
2. ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಐಎಫ್1 2025, ದಿನಾಂಕ:22.04.2025
3. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025, ದಿನಾಂಕ: 02.06.2025
4. ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025, ದಿನಾಂಕ: 26.08.2025
5. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2025, ದಿನಾಂಕ:24.09.2025
6. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರ ಪತ್ರ ಸಂಖ್ಯೆ: ಎಸ್ ನಿಸಸಂಸ್ಥೆ/ಅನುದಾನ/1714/2025-26, ದಿನಾಂಕ:18.11.2025
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಇಎಪಿ/09/2023-24/1415, ದಿನಾಂಕ:26.11.2025

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ 2025-26ನೇ ಸಾಲಿನ ಆಯವ್ಯಯದಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ 2025-26ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾತಿಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ-5 ರಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ಕಾರ್ಯಕ್ರಮಗಳು ಒಳಗೊಂಡಿರುತ್ತವೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಎರಡನೇ ತ್ರೈಮಾಸಿಕ ಕಂತಿನ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಆದೇಶದಲ್ಲಿ, 2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಅನುದಾನದಲ್ಲಿ ಅಕ್ಟೋಬರ್ 2025 ರಿಂದ ಡಿಸೆಂಬರ್ 2025 ರವರೆಗಿನ ಮೂರನೇ ತ್ರೈಮಾಸಿಕ ಕಂತಿನ ಹಣ ಬಿಡುಗಡೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(6) ಮತ್ತು (7)ರ ಪತ್ರಗಳಲ್ಲಿ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸುವಂತೆ ಅನುಕ್ರಮವಾಗಿ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರುಗಳು ಕೋರಿರುತ್ತಾರೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಆಂತರಿಕ ಆರ್ಥಿಕ ಸಲಹೆಗಾರರೊಂದಿಗೆ ಸಮಾಲೋಚಿಸಿ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳ ವೆಚ್ಚಗಳಿಗಾಗಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಎಸ್‌ಜಿಎಫ್ 2025,
ಬೆಂಗಳೂರು, ದಿನಾಂಕ:22ನೇ ಡಿಸೆಂಬರ್ 2025

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2852-08-201-0-09-059ರಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಈ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ರೂ.200.00 ಲಕ್ಷಗಳ ಮೊತ್ತದಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವಾಗಿ ರೂ.50.00 ಲಕ್ಷಗಳನ್ನು(ಐವತ್ತು ಲಕ್ಷಗಳು ಮಾತ್ರ) ಬಿಡುಗಡೆಗೊಳಿಸಿ, ಖಜಾನೆ-2 ರಿಂದ ಸೆಳೆದು ವೆಚ್ಚ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ(ಆಯವ್ಯಯ ಸೂಚನೆ) ಸಂಖ್ಯೆ: ಆಇ 51(ಟಿ) ವೆಚ್ಚ-1/2025, ದಿನಾಂಕ:09.04.2025 ರನ್ವಯ ಹಾಗೂ 2025-26ನೇ ಸಾಲಿನ ಕ್ರಿಯಾ ಯೋಜನೆಯನುಸಾರ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಕೆ ಮಾಡುವುದು.

2. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 34 ಟಿಎಆರ್ 2025, ದಿನಾಂಕ: 27.06.2025 ರಲ್ಲಿ ಸರ್ಕಾರದ ನಿಗಮ/ಮಂಡಳಿ/ಪ್ರಾಧಿಕಾರಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಬ್ಯಾಂಕ್ ವಹಿವಾಟುಗಳ ಅಂಕಿ-ಅಂಶಗಳನ್ನು ಆಂತರಿಕ ಆರ್ಥಿಕ ಸಲಹೆಗಾರರು ಪ್ರಮಾಣೀಕರಿಸಬೇಕಿರುತ್ತದೆ. ಆದ್ದರಿಂದ ಈ ಸಂಬಂಧ ಕ್ರಮವಹಿಸಲು ಮುಂದಿನ ಅನುದಾನ ಬಿಡುಗಡೆ ಸಂದರ್ಭದಲ್ಲಿ ಸಂಪೂರ್ಣ ವಿವರವನ್ನು (NTT module ನಲ್ಲಿ ಲಿಂಕ್ ಮಾಡಲಾದ ಬ್ಯಾಂಕ್ ಖಾತೆ ವಿವರ, ಖಾತೆಗಳಲ್ಲಿ ಲಭ್ಯವಿರುವ ಮೊತ್ತ, ಬಳಕೆ ಪ್ರಮಾಣ ಪತ್ರ, ಲೆಕ್ಕ ಸಮನ್ವಯದ ವಿವರ ಮತ್ತು ಇತರೆ ಅಗತ್ಯ ಮಾಹಿತಿ) ಒದಗಿಸುವುದು.

3. ಸಹಾಯಾನುದಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ-161 ರಲ್ಲಿ ಇಲಾಖಾ ಮುಖ್ಯಾಧಿಕಾರಿಗಳಿಗೆ ನೀಡಲಾದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

4. 2025-26ನೇ ಸಾಲಿನ ಲೆಕ್ಕಶೀರ್ಷಿಕೆ:2852-08-201-0-09-059ರಡಿ ಬಿಡುಗಡೆ ಮಾಡಲಾದ ಅನುದಾನವನ್ನು ವೆಚ್ಚ ಮಾಡಿರುವ ಕುರಿತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 161(b)(5) ರಡಿಯಲ್ಲಿ ಸೂಚಿಸಿರುವ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

5. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2025, ದಿನಾಂಕ:24.09.2025 ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 03 ಟಿಎಫ್‌ಪಿ 2025, ದಿನಾಂಕ:24.09.2025 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಸಿಐ 62 ಐ.ಎಫ್.1 2025, ದಿನಾಂಕ:28.11.2025 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-76

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಸಾಲಿನ ಆಯವ್ಯಯದಲ್ಲಿ ಸಕ್ಕರೆ ಕಾರ್ಖಾನೆಗಳ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿ ಯೋಜನೆಗೆ ಹಂಚಿಕೆ ಮಾಡಿರುವ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ:
1. 2025-26ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:348
2. ಸರ್ಕಾರದ ಆದೇಶ ಸಂಖ್ಯೆ: ವಾಕೈ 19 ಐಎಫ್-1 2025, ದಿನಾಂಕ:22.04.2025
3. ಸರ್ಕಾರದ ಆದೇಶ ಸಂಖ್ಯೆ: ಸಿಐ 268 ಎಸ್‌ಜಿಎಫ್ 2025, ದಿನಾಂಕ:03.09.2025
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ರಸ್ತೆಕರ/17/2024-25/1372, ದಿನಾಂಕ:14.07.2025, 19.07.2025, 28.07.2025, 12.08.2025, 13.08.2025, 16.08.2025, 28.08.2025, 16.09.2025, 20.11.2025, 28.11.2025, 29.12.2025, 18.02.2026, 03.03.2026 ಮತ್ತು 06.03.2026
5. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2025, ದಿನಾಂಕ:02.04.2025
6. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2025, ದಿನಾಂಕ:30.06.2025
7. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2025, ದಿನಾಂಕ:24.09.2025
8. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4 ಟಿಎಫ್‌ಪಿ 2025, ದಿನಾಂಕ:01.01.2026

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಖಂಡಿಕೆ-348ರಲ್ಲಿ "ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿನ ರಸ್ತೆಗಳ ಅಭಿವೃದ್ಧಿಗಾಗಿ 2025-26ನೇ ಸಾಲಿಗೆ ರೂ.20.00 ಕೋಟಿಗಳನ್ನು" ಒದಗಿಸಲಾಗಿದೆ ಎಂದು ಘೋಷಿಸಲಾಗಿರುತ್ತದೆ ಹಾಗೂ 2025-26ನೇ ಸಾಲಿಗೆ ಲೆಕ್ಕಶೀರ್ಷಿಕೆ: 4860-04-004-0-01-072 ರಡಿಯಲ್ಲಿ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಯೋಜನೆಗಾಗಿ ರೂ.20.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ 2025-26ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾತಿಯನ್ನು ನೀಡಲಾಗಿದ್ದು, ಸದರಿ ಆದೇಶದ ಅನುಬಂಧ-5ರಲ್ಲಿ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿನ ರಸ್ತೆಗಳ ಅಭಿವೃದ್ಧಿ ಯೋಜನೆಯು ಒಳಗೊಂಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 4860-04-004-0-01-172 – ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆ-ರಸ್ತೆಗಳು ರಡಿಯಲ್ಲಿ ಹಂಚಿಕೆ ಮಾಡಿರುವ ರೂ.20.00 ಕೋಟಿಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ವಾಕೈ 91 ಸಸಕಾ 2015, ದಿನಾಂಕ:15.09.2016 ರನ್ವಯ ವೆಚ್ಚ ಮಾಡುವ ಸಂಬಂಧ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರಗಳಲ್ಲಿ, ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆ(ಲೆಕ್ಕಶೀರ್ಷಿಕೆ-4860-04-004-0-01-172 ರಸ್ತೆಗಳು) ಅಡಿಯಲ್ಲಿ ದಾವಣಗೆರೆ, ವಿಜಯಪುರ, ಬೆಳಗಾವಿ, ಬೀದರ್, ಕಲಬುರಗಿ, ಯಾದಗಿರಿ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ, ಕಾಮಗಾರಿ ಮುಕ್ತಾಯಗೊಂಡು ಬಿಲ್ಲು ಪಾವತಿಸಲು, ಅನುಷ್ಠಾನದ ಹಂತದಲ್ಲಿರುವ ಕಾಮಗಾರಿಗಳಿಗೆ ಮತ್ತು 2025-26ನೇ ಸಾಲಿನಲ್ಲಿ ಹೊಸದಾಗಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳಿಗಾಗಿ ರೂ.2898.61 ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದರು. ಸದರಿ ಕಾಮಗಾರಿಗಳಲ್ಲಿ ಕಲಬುರಗಿ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಮುಕ್ತಾಯಗೊಂಡಿರುವ ಆಯ್ದ ಕಾಮಗಾರಿಗಳ ಕುರಿತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಕೃಷಿ ಮಾರಾಟ ಇಲಾಖೆ ಇವರ ಮೂಲಕ ಸ್ಥಳ ಪರಿಶೀಲಿಸಿ ವರದಿಯನ್ನು ಪಡೆಯಲಾಗಿದ್ದು, ಸದರಿ ಆಯ್ದ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಶ್ರೀ ರೇಣುಕಾ ಶುಗರ್ಸ್ ಲಿ., ಹವಳಗ, ಅಫಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ			
ಕ್ರ. ಸಂ	**ಕಾಮಗಾರಿ ಸಂಖ್ಯೆ**	**ಕಾಮಗಾರಿಯ ಹೆಸರು**	**ಅಂದಾಜು/ಬಿಲ್ಲಿನ ಮೊತ್ತ (ರೂ.ಲಕ್ಷಗಳಲ್ಲಿ)**
1.	3	ತೆಲ್ಲೂರು ಗ್ರಾಮದ ನಬಿಸಾಬ ಮುಲ್ಲಾ ಹೊಲದಿಂದ ನೀಲಪ್ಪ ಕಿರಣಿಗೆ ಹೊಲದವರೆಗೆ ರಸ್ತೆ ಸುಧಾರಣೆ	4.98
2.	4	ತೆಲ್ಲೂರು ಗ್ರಾಮದ ಶಾಮತಪ್ಪ ತಲವಾರ ಹೊಲದಿಂದ ಚಿದಾನಂದ ಗುಡ್ಡೆವಾಳಿ ಹೊಲದವರೆಗೆ ರಸ್ತೆ ಸುಧಾರಣೆ	4.98
3.	5	ತೆಲ್ಲೂರು ಗ್ರಾಮದ ಸಾಹೇಬಗೌಡ ಇಂಗಳಗಿ ಹೊಲದಿಂದ ಬಾಬುರಾವ ಕಣ್ಣಿ ಹೊಲದವರೆಗೆ ರಸ್ತೆ ಸುಧಾರಣೆ	4.99
4.	6	ತೆಲ್ಲೂರು ಗ್ರಾಮದ ದೇವೆಗೌಡ ಪಾಟೀಲ ಹೊಲದಿಂದ ಚಂದ್ರಕಾಂತ ಹೊಲದವರೆಗೆ ರಸ್ತೆ ಸುಧಾರಣೆ	4.97
5.	11	ಬಟಗೇರಾ ಗ್ರಾಮದ ಶ್ರೀ ಶೈಲ ಪಾಟೀಲ ಹೊಲದಿಂದ ನೀಲಪ್ಪ ಕಿರಣಿಗೆ ಹೊಲದವರೆಗೆ ರಸ್ತೆ ಸುಧಾರಣೆ	4.97
6.	12	ಗುಳನೂರ ಗ್ರಾಮದ ದತ್ತಗುರು ಬಿದನೂರ ಹೊಲದವರೆಗೆ ರಸ್ತೆ ಸುಧಾರಣೆ	4.99
7.	17	ಗುಳನೂರ ಗ್ರಾಮದ ಬಟಗೇರಾ ಬಿದನೂರ ಹೊಲದವರೆಗೆ ರಸ್ತೆ ಸುಧಾರಣೆ	4.98
8.	23	ಆತನೂರ ಗ್ರಾಮದಿಂದ ನಿಂಗಣ್ಣ ಎರಡೆತ್ತಿ ಹೊಲದವರೆಗೆ ರಸ್ತೆ ಸುಧಾರಣೆ	4.97
9.	25	ಕೆರಕನಹಳ್ಳಿ ಗ್ರಾಮದ ಶ್ರೀ ಶೈಲ ಕಲಶೆಟ್ಟಿ ಹೊಲದವರೆಗೆ ರಸ್ತೆ ಸುಧಾರಣೆ	4.98
10.	26	ಕೆರಕನಹಳ್ಳಿ ಮುಖ್ಯರಸ್ತೆಯಿಂದ ನಿಂಬಣ್ಣ ಬಿದನೂರ ಹೊಲದವರೆಗೆ ರಸ್ತೆ ಸುಧಾರಣೆ	4.99
11.	33	ಗೊಬ್ಬೂರ ಗ್ರಾಮದ ಮುಖ್ಯರಸ್ತೆಯಿಂದ ಕುಂಬಾರ ಲಕ್ಷ್ಮೀ ಗುಡಿಯವರೆಗೆ ರಸ್ತೆ ಸುಧಾರಣೆ	4.98
12.	34	ಗೊಬ್ಬೂರ (ಬಿ) ಗ್ರಾಮದ ಮಾಚನಾಳ ತಾಂಡಾದವರೆಗೆ ಕೂಡು ರಸ್ತೆ ಸುಧಾರಣೆ	4.97
ಒಟ್ಟು ಮೊತ್ತ			**59.75**
ಎನ್.ಎಸ್.ಎಲ್. ಶುಗರ್ಸ್ ಲಿ., ಭೂಸನೂರು, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ
1.	1	ಹಾಳ ತಡಕಲ್ ಗ್ರಾಮದ ದಿಗಂಬರ ಬೀರಣ್ಣ ಪೂಜಾರಿ ಹೊಲದಿಂದ ಗುರುನಾಥ ಬೀರಣ್ಣ ಪೂಜಾರಿ ಹೊಲದವರೆಗೆ ರಸ್ತೆ ಸುಧಾರಣೆ	4,98,300.00
2.	2	ಹಾಳ ತಡಕಲ್ ಗ್ರಾಮದ ಶಾಂತಾಕುಮಾರ ಬಸವರಾಜ ಪೋಲೀಸ ಪಾಟೀಲ ಹೊಲದಿಂದ ಬಸವರಾಜ ಸೈಬಣ್ಣ ಕಿಣಗಿ ಹೊಲದವರೆಗೆ ರಸ್ತೆ ಸುಧಾರಣೆ	4,96,000.00

3.	3	ದೇವಾಂಗ ಗ್ರಾಮದ ಸೂರ್ಯಾಕಾಂತ ಗುರುಲಿಂಗಪ್ಪ ಮಾಲಿ ಪಾಟೀಲ ಹೊಲದಿಂದ ಸುಭಾಷ ಸೈಬಣ್ಣ ಕಡಪದ ಹೊಲದವರೆಗೆ ರಸ್ತೆ ಸುಧಾರಣೆ	4,97,500.00
4.	4	ದೇವಾಂಗ ಗ್ರಾಮದಿಂದ ಹಣಮಂತ ಪೂಜಾರಿ ಹೊಲದವರೆಗೆ ರಸ್ತೆ ಸುಧಾರಣೆ	4,96,400.00
5.	5	ದೇವಾಂಗ ಗ್ರಾಮದಿಂದ ಭಗವಂತ ರಾಣಪ್ಪ ತಳಕೇರಿ ಹೊಲದವರೆಗೆ ರಸ್ತೆ ಸುಧಾರಣೆ	4,95,700.00
6.	6	ಸನಗುಂದಾ ಗ್ರಾಮದಿಂದ ಬಿಮಶ್ಯಾ ಕುಮಸಿ ಹೊಲದಿಂದ ಸಿದ್ರಮಪ್ಪಾ ಮಾಸ್ಟರ ಭಾವಿಕಟ್ಟಿ ಹೊಲದವರೆಗೆ ರಸ್ತೆ ಸುಧಾರಣೆ	4,94,500.00
7.	7	ದೇವಾಂಗ ಗ್ರಾಮದ ಪುತಳಾಬಾಯಿ ಶಿವರಾಯ ಮಾಣಪೊಜಿ ಹೊಲದವರೆಗೆ	4,95,500.00
8.	17	ಬಸವನ ಸಂಗೋಳಗಿ ಗ್ರಾಮದ ಬಸವರಾಜ ನಾಗೇಂದ್ರಪ್ಪ ಬಿನ್ನಪಗೋಳ ಹೊಲದಿಂದ ಮಲ್ಲಿನಾತ ರೇವಣ್ಣ ಸಿದ್ದಪ್ಪಾ ಹೊಲದವರೆಗೆ ರಸ್ತೆ ಸುಧಾರಣೆ	4,93,700.00
9.	18	ಬಸವನ ಸಂಗೋಳಗಿ ಗ್ರಾಮದ ಬಸವರಾಜ ಪಂಡಿತರಾಜ ವಿರದೆ ಇವರ ಹೊಲದಿಂದ ಶಾರದಾಬಾಯಿ ಬಸವರಾಜ ಹೊಲದವರೆಗೆ ರಸ್ತೆ ಸುಧಾರಣೆ	4,94,600.00
10.	19	ಬಸವನ ಸಂಗೋಳಗಿ ಗ್ರಾಮದ ಸರಕಾರಿ ಪ್ರೌಢಶಾಲೆಯಿಂದ ಚಂದ್ರಕಾಂತ ಯಶ್ವಂತರಾವ ಚನ್ನಪಗೋಳ ಹೊಲದವರೆಗೆ ರಸ್ತೆ ಸುಧಾರಣೆ	4,92,700.00
11.	20	ಬಸವನ ಸಂಗೋಳಗಿ ಗ್ರಾಮದ ಕಮಲಬಾಯಿ ಗಂಡ ಚಂದ್ರಕಾಂತ ಎರದೆ ಇವರ ಹೊಲದಿಂದ ಶ್ರೀಮಂತರಾವ ಎರದೆ ಇವರ ಹೊಲದವರೆಗೆ ರಸ್ತೆ ಸುಧಾರಣೆ	4,96,000.00
ಒಟ್ಟು ಮೊತ್ತ			**54,50,900.00**
ಅಥಣಿ ಶುಗರ್ಸ್ ಲಿ., ಕಾಗವಾಡ ತಾಲ್ಲೂಕು, ಬೆಳಗಾವಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	(3) 161/ 2015-16	ಕಾಗವಾಡ ತಾಲ್ಲೂಕಿನ ಕಿಡಗೇಡಿ ಗ್ರಾಮದ ಮಲ್ಲು ಚೌರಿ ತೋಟದಿಂದ ಕೆಂಪವಾಡವರೆಗಿನ ರಸ್ತೆ ಸುಧಾರಣೆ	10.45
2.		ಕಾಗವಾಡ ತಾಲ್ಲೂಕಿನ ನವಲಿಹಾಳ ಗ್ರಾಮದ ಬೆಳ್ಳಿ ಬೆಳಕು ರಸ್ತೆಯಿಂದ ಕೆಂಪವಾಡ ಕೆನಾಲ ರಸ್ತೆ ಸುಧಾರಣೆ	10.00
ಒಟ್ಟು ಮೊತ್ತ			**20.45**
ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ಬೆಳಗಾವಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)

3.	154/ 2015-16	ಕಾಗವಾಡ ತಾಲ್ಲೂಕಿನ ಕಾಗವಾಡ ಗ್ರಾಮದ ಜೆ.ಸಿ.ಎಸ್. ರಸ್ತೆಗೆ ಕೂಡುವ ಕಾಗವಾಡ-ನರವಾಡ ರಸ್ತೆ ಕಿ.ಮೀ 0.00 ರಿಂದ 2.00 ರವರೆಗೆ ರಸ್ತೆ ಸುಧಾರಣೆ	25.00
4.	(05) 155/ 2015-16	ಕಾಗವಾಡ ತಾಲ್ಲೂಕಿನ ಕಾಗವಾಡ ಗ್ರಾಮದ ಚಿಕ್ಕೋಡಿ-ಮೀರಜ್ ಮುಖ್ಯರಸ್ತೆಯ ಪ್ಯಾಕ್ಟರಿ ಗೇಟದಿಂದ ನರವಾಡ ರಸ್ತೆ ಕೂಡುವ ರಸ್ತೆ ಕಿ.ಮೀ 0.00 ರಿಂದ 1.7ರವರೆಗೆ ರಸ್ತೆ ಸುಧಾರಣೆ	25.00
7.		ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಗ್ರಾಮದ ಉಗಾರ ಖುರ್ದ – ಕುಡಚಿ ಹಳೆ ರಸ್ತೆ ಸುಧಾರಣೆ	20.00
ಒಟ್ಟು ಮೊತ್ತ			**70.00**
ದಿ ಉಗಾರ ಶುಗರ್ಸ್ ವರ್ಕ್ಸ್ ಲಿ., ಬೆಳಗಾವಿ ಜಿಲ್ಲೆ			
8.	02/159/ 2015-16	ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಗ್ರಾಮದ ಉಗಾರ ಬುದ್ರುಕ ಮುಖ್ಯರಸ್ತೆಗೆ ಕೂಡುವ ರತ್ನಾ ಗಾರ್ಡನದಿಂದ ಘಾರಗೆ ಮಳಾವರೆಗಿನ ರಸ್ತೆ ಸುಧಾರಣೆ	16.91
9		ಕಾಗವಾಡ ತಾಲ್ಲೂಕಿನ ಉಗಾರ ಬುದ್ರುಕ-ಶಿರಗುಪ್ಪಿ ರಸ್ತೆಯಿಂದ ಪರಮೇಶ್ವರವಾಡಿವರೆಗಿನ ರಸ್ತೆ ಡಾಂಬರೀಕರಣ	25.00
ಒಟ್ಟು ಮೊತ್ತ			**41.91**
ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ., ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	144/ 2015-16	ಚಿಕ್ಕೋಡಿ ತಾಲ್ಲೂಕಿನ ಕಾರ್ಖಾನೆಯಿಂದ ಮುಖ್ಯದ್ವಾರದ ಹತ್ತಿರದಿಂದ ಗೊಂಧಳಿ ತೋಟದ ರಸ್ತೆ ಅಭಿವೃದ್ಧಿಪಡಿಸುವುದು.	40.10
ಒಟ್ಟು ಮೊತ್ತ			**40.10**
ಶಿವಸಾಗರ ಸಕ್ಕರೆ ಕಾರ್ಖಾನೆ., ಉದುಪುಡಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	230/ 2015-16	ರಾಮದುರ್ಗ ತಾಲ್ಲೂಕಿನ ದಾಡಿಭಾವಿ ತಾಂಡಾದಿಂದ ಉದುಪುಡಿ ಸಕ್ಕರೆ ಕಾರ್ಖಾನೆಗೆ ಹೋಗುವ ರಸ್ತೆ ಸುಧಾರಣೆ	5.00
2.	233/ 2015-16	ರಾಮದುರ್ಗ ತಾಲ್ಲೂಕಿನ ರೊಕ್ಕದಕಟ್ಟಿ ಹೋಗುವ ರಸ್ತೆಯಿಂದ ಲಕ್ಷ್ಮಣ ಉದುಪುಡಿ ಸಕ್ಕರೆ ಕಾರ್ಖಾನೆಗೆ ಹೋಗುವ ರಸ್ತೆ ಸುಧಾರಣೆ	5.00
3.	236/ 2015-16	ರಾಮದುರ್ಗ ತಾಲ್ಲೂಕಿನ ಹುಲಕುಂದ ಗ್ರಾಮದ ಸೀಮೆ ಲಕ್ಕಮ್ಮನ ಗುಡಿಯಿಂದ ಹುಲಕುಂದ ಸ್ಮಶಾನದವರೆಗೆ ರಸ್ತೆ ಸುಧಾರಣೆ	5.00
4.	237/ 2015-16	ರಾಮದುರ್ಗ ತಾಲ್ಲೂಕಿನ ಉಜ್ಜನಕೊಪ್ಪದಿಂದ ಜೀವಾಪೂರ ರಸ್ತೆ ತಾಲೂಕಿನ ಹದ್ದಿನವರೆಗೆ ರಸ್ತೆ ಸುಧಾರಣೆ	3.92
ಒಟ್ಟು ಮೊತ್ತ			**18.92**

ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ, ಖಾನಪೇಠ,			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	209/ 2015-16	ರಾಮದುರ್ಗ ತಾಲ್ಲೂಕಿನ ಕಟಗೋಳ ಗ್ರಾಮದ ಗುಡಚಿ ರಸ್ತೆಯಿಂದ ದುರದುಂಡೇಶ್ವರ ಗುಡಿಯವರೆಗೆ ರಸ್ತೆ ಸುಧಾರಣೆ	5.00
2.	213/ 2015-16	ರಾಮದುರ್ಗ ತಾಲ್ಲೂಕಿನ ಸುರೇಬಾನ ಕೊಣ್ಣೂರ ರಸ್ತೆಯಿಂದ ಹೂಗಾರ ಹೊಲದವರೆಗೆ ರಸ್ತೆ ಸುಧಾರಣೆ	5.00
3.	218/ 2015-16	ರಾಮದುರ್ಗ ತಾಲ್ಲೂಕಿನ ಮಾಗನೂರ ಪ್ಲಾಟದಿಂದ ಕೆರೆಯವರೆಗೆ ರಸ್ತೆ ಸುಧಾರಣೆ	5.00
4.	220/ 2015-16	ರಾಮದುರ್ಗ ತಾಲ್ಲೂಕಿನ ಹಳ್ಳೇ ತೊರಗಲ್ ಮೇಗುಂಡೇಶ್ವರ ಕೊಳ್ಳದ ಮುಖ್ಯ ರಸ್ತೆಯಿಂದ ಶ್ರೀ ಬಸೀರ ಮಕಾನದಾರ ಹೊಲದವರೆಗೆ ರಸ್ತೆ ಸುಧಾರಣೆ	5.00
5.	223/ 2015-16	ರಾಮದುರ್ಗ ತಾಲ್ಲೂಕಿನ ಕೆ.ಜುನಿಪೇಠ ಯಲ್ಲಮ್ಮ ದೇವಸ್ಥಾನದಿಂದ ಆಟರ್ಗಲ್ ರಸ್ತೆಯವರೆಗೆ ರಸ್ತೆ ಸುಧಾರಣೆ	5.00
6.	226/ 2015-16	ರಾಮದುರ್ಗ ತಾಲ್ಲೂಕಿನ ಬಿಜಗುಪ್ಪಿ ಗ್ರಾಮದ ಸಿದ್ದಪ್ಪ ಸಿಂಗಾಡಿ ಹೊಲದಿಂದ ಈರಪ್ಪ ಸಕ್ರಿ ಹೊಲದವರೆಗೆ ರಸ್ತೆ ಸುಧಾರಣೆ	4.44
ಒಟ್ಟು ಮೊತ್ತ			**29.44**
ಶ್ರೀ ರೇಣುಕಾ ಶುಗರ್ಸ್ ಸಕ್ಕರೆ ಕಾರ್ಖಾನೆ (ಲಿ) ಮುನೋಳಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	2	ಸವದತ್ತಿ ತಾಲ್ಲೂಕಿನ ಕಲ್ಲೋಳಿ ಗ್ರಾಮದಲ್ಲಿ ಹಣಮಂತ ದಂಡಿನ ಹೊಲದಿಂದ ಭೀಮತಿ ಪಾಟೀಲ ಹೊಲದವರೆಗೆ ರಸ್ತೆ ಸುಧಾರಣೆ	4.00
2	2	ಸವದತ್ತಿ ತಾಲ್ಲೂಕಿನ ಕಲ್ಲೋಳಿ ಗ್ರಾಮದಲ್ಲಿ ಯಕ್ಕುಂಡಿಯವರ ಹೊಲದಿಂದ ಮರಲಿಂಗನ್ನವರ ಹೊಲದವರೆಗೆ ರಸ್ತೆ ಸುಧಾರಣೆ	4.20
3	172/ 2015-16	ಸವದತ್ತಿ ತಾಲ್ಲೂಕಿನ ಜೀವಾಪುರ ಗ್ರಾಮದ ಪಟಾದರ ಹೊಲದಿಂದ ರೆಡ್ಡಿಯವರ ಹೊಲದವರೆಗೆ ರಸ್ತೆ ಸುಧಾರಣೆ	4.90
4	175/ 2015-16	ಸವದತ್ತಿ ತಾಲ್ಲೂಕಿನ ಮಬನೂರ ಗ್ರಾಮದಲ್ಲಿ ವಿಠ್ಠಲ ಮಾದರ ಹೊಲದಿಂದ ರಾಮಕೃಷ್ಣ ಬಸಪ್ಪ ಅಗಸಿಮನಿಯವರ ಹೊಲದವರೆಗೆ ರಸ್ತೆ ಸುಧಾರಣೆ	4.70
5	170/ 2015-16	ಸವದತ್ತಿ ತಾಲ್ಲೂಕಿನ ತಲ್ಲೂರ ಗ್ರಾಮದಲ್ಲಿ ಈರಣ್ಣ ಹುದ್ದಾರ ಇವರ ಹೊಲದಿಂದ ನೀಲಕಂಠ ಸರದಾರ ಇವರ ಹೊಲದವರೆಗೆ ರಸ್ತೆ ಸುಧಾರಣೆ	4.90
6	192/ 2015-16	ಸವದತ್ತಿ ತಾಲ್ಲೂಕಿನ ಆಲದಕಟ್ಟಿ ಗ್ರಾಮದ ಮಲ್ಲನಗೌಡ ಸಣ್ಣಗೌಡ್ರ ಹೊಲದಿಂದ ದೊಡ್ಡಕಲ್ಲಪ್ಪ ಸಣ್ಣಗೌಡ್ರ ಹೊಲದವರೆಗೆ ರಸ್ತೆ ಸುಧಾರಣೆ	4.20
ಒಟ್ಟು ಮೊತ್ತ			**26.90**

ಬಬಲೇಶ್ವರ ತಾಲ್ಲೂಕು, ವಿಜಯಪುರ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	3	ಕಾಖಂಡಿಕಿ ಕಿಲಾರಹಟ್ಟಿ -ಮಮದಾಪೂರ ರಸ್ತೆ ಸುಧಾರಣೆ	20.00
2.	4	ಸಂಗಾಪೂರ ಎಚ್.ಎಸ್. ಕಂಬಾಗಿ ರಸ್ತೆ ಸುಧಾರಣೆ	25.00
3.	6	ಹೊಕ್ಕುಂಡಿ ಗ್ರಾಮದಿಂದ ತಿಗಣಿಬಿದರಿ ಗ್ರಾಮದವರೆಗೆ ರಸ್ತೆ ಸುಧಾರಣೆ	80.00
4.	5	ಕಾರಜೋಳ ದಿಂದ ಹಳ್ಳಿ ರಸ್ತೆ ಸುಧಾರಣೆ	25.00
ಒಟ್ಟು ಮೊತ್ತ			**150.00**
ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	10	ಹಲಸಂಗಿ ದಿಂದ ರಾಷ್ಟ್ರೀಯ ಹೆದ್ದಾರಿ (ಎನ್. ಹೆಚ್)ವರೆಗಿನ ರಸ್ತೆ ಸುಧಾರಣೆ	50.00
ಒಟ್ಟು ಮೊತ್ತ			**50.00**
ಚಡಚಣ ತಾಲ್ಲೂಕು, ವಿಜಯಪುರ ಜಿಲ್ಲೆ			
1	11	ಹಲಸಂಗಿ ದಿಂದ ರಾಷ್ಟ್ರೀಯ ಹೆದ್ದಾರಿಗೆ ಹೋಗುವ ರಸ್ತೆ ನಿರ್ಮಾಣ ಮಾಡುವುದು.	50.47
2	25	ಹಲಸಂಗಿದಿಂದ ಹಿಂಗಣಿವರೆಗೆ ಸಿ.ಸಿ ರಸ್ತೆ ನಿರ್ಮಾಣ	15.00
ಒಟ್ಟು ಮೊತ್ತ			**65.47**
ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1	13	ಸಿಂಧಗಿ ಮತಕ್ಷೇತ್ರದ ಬಂಕಲಗಿ ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ	50.00
ಒಟ್ಟು ಮೊತ್ತ			**50.00**
ಅಲಮೇಲ ತಾಲ್ಲೂಕು, ವಿಜಯಪುರ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1	14	ಆಲಮೇಲ ಮುಖ್ಯರಸ್ತೆಯಿಂದ ಹೂವಿನಹಳ್ಳಿ ಕೂಡುವ ರಸ್ತೆಗೆ ಸಿಸಿ ರಸ್ತೆ ಮಾಡುವುದು	50.00
2	15	ಆಲಮೇಲ ಮುಖ್ಯ ರಸ್ತೆಯಿಂದ ಕಲ್ಲಹಳ್ಳಿ ಕೂಡುವ ರಸ್ತೆಗೆ ಸಿಸಿ ರಸ್ತೆ ಮಾಡುವುದು	25.00
ಒಟ್ಟು ಮೊತ್ತ			**75.00**
ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ			
ಕ್ರ. ಸಂ	ಕಾಮಗಾರಿ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು/ಬಿಲ್ಲಿನ ಮೊತ್ತ (ರೂ. ಲಕ್ಷಗಳಲ್ಲಿ)
1.	16	ಮನಗೂಳಿ ದಿಂದ ಟಕ್ಕಳಕಿ ರಸ್ತೆ	70.00
ಒಟ್ಟು ಮೊತ್ತ			**70.00**

ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ			
1.	22	ಮುದ್ದೇಬಿಹಾಳ ತಾಲ್ಲೂಕಿನ ಮದರಿ ಕ್ರಾಸ್‌ದಿಂದ ಯರಗಲ್ (ವಾಯ ಶುಗರ್ ಫ್ಯಾಕ್ಟರಿ) ಗ್ರಾಮದವರೆಗೆ ರಸ್ತೆ ಡಾಂಬರೀಕರಣ ಮಾಡುವುದು.	51.00
2.	23	ಬಾಲಾಜಿ ಶುಗರ್ ಸಕ್ಕರೆ ಕಾರ್ಖಾನೆಯ ಯರಗಲ್ ಮುಂಭಾಗದಲ್ಲಿ ಹಾಯ್ದು ಹೋಗುವ ಯರಗಲ್ - ಮದರಿ ಮುಖ್ಯ ರಸ್ತೆಯ ಹಳ್ಳದ ಹತ್ತಿರ ಸೇತುವೆಯ ರಸ್ತೆಗೆ ಆರ್.ಸಿ.ಸಿ ತಡೆಗೋಡೆ (RCC Retainning Wall)	40.00
ಒಟ್ಟು ಮೊತ್ತ			**91.00**

2025-26ನೇ ಸಾಲಿನಲ್ಲಿ ರಸ್ತೆ ಕರ ಅಭಿವೃದ್ಧಿ ಯೋಜನೆಯಡಿ ಕಲ್ಪಿಸಲಾಗಿರುವ ರೂ.20.00ನ ಕೋಟಿಗಳ ಅನುದಾನದಲ್ಲಿ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪೂರ್ಣಗೊಂಡ ರಸ್ತೆ ಕಾಮಗಾರಿಗಳಿಗೆ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡುವಂತೆ ವರದಿ ಸಲ್ಲಿಸಿರುತ್ತಾರೆ.

ಕ್ರ.ಸಂ	ಜಿಲ್ಲೆಯ ಹೆಸರು	ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ	ಮುಕ್ತಾಯಗೊಂಡ ಕಾಮಗಾರಿಗಳ ಅನುದಾನದ ಮೊತ್ತ (ರೂ.ಗಳಲ್ಲಿ)
1	ದಾವಣಗೆರೆ	1	48,00,000.00
2	ಬೆಳಗಾವಿ	25	1,38,11,693.00
3	ಬೆಳಗಾವಿ	6	29,00,000.00
4	ಬೆಳಗಾವಿ	9	1,31,68,432.00
5	ಬೀದರ್	28	1,39,24,050.00
6	ಉತ್ತರ ಕನ್ನಡ	2	23,00,000.00
7	ಕಲಬುರಗಿ	35	1,69,55,800.00
8	ಬೆಳಗಾವಿ	31	1,55,11,962.00
9	ಕಲಬುರಗಿ	56	2,76,66,000.00
10	ಬೀದರ್	21	1,04,58,945.00
11	ಬೆಳಗಾವಿ	1	66,90,311.00
12	ಮಂಡ್ಯ	5	9,00,000.00
13	ವಿಜಯಪುರ	21	7,19,90,000.00
ಒಟ್ಟು		**241**	**20,10,77,193.00**

ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರು ಕೋರಿರುವ ಅನುದಾನದಲ್ಲಿ ರೂ.7,09,12,807.00 ಗಳನ್ನು 2025-26ನೇ ಸಾಲಿನಲ್ಲಿ ಆಯವ್ಯಯದಲ್ಲಿ ಮಂಜೂರು ಮಾಡಲು ಹಾಗೂ ಉಳಿದ ರೂ.10,77,193.00 ಗಳನ್ನು 2026-27ನೇ ಸಾಲಿನ ಆಯವ್ಯಯದಲ್ಲಿ ವಿಜಯಪುರ ಜಿಲ್ಲೆಯ ರಸ್ತೆ ಕಾಮಗಾರಿಗಳಿಗೆ ಬಿಡುಗಡೆ ಮಾಡಬಹುದಾಗಿರುತ್ತದೆ. 2025-26ನೇ ಸಾಲಿಗೆ ರಸ್ತೆ ಕಾಮಗಾರಿಗಳಿಗೆ ಅನುದಾನ ಬಿಡುಗಡೆಗೊಳಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಿಂದ (8)ರ ಆದೇಶಗಳಲ್ಲಿ, 2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 4860-04-004-0-01-172 ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆ-ರಸ್ತೆಗಳು ರಡಿಯಲ್ಲಿ ರೂ.20.00

ಕೋಟಿಗಳನ್ನು ಮಾತ್ರ ಹಂಚಿಕೆ ಮಾಡಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ಲು ಪಾವತಿಸುವುದಕ್ಕಾಗಿ ಕೆಳಕಂಡಂತೆ ಅನುದಾನವನ್ನು ಬಿಡುಗಡೆಗೊಳಿಸಲು ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಸ್‌ಜಿಎಫ್ 2025,
ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 4860-04-004-0-01-172 ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆ-ರಸ್ತೆಗಳು ರಡಿಯಲ್ಲಿ ಹಂಚಿಕೆ ಮಾಡಿರುವ ರೂ.20.00 ಕೋಟಿಗಳ ಮೊತ್ತದಲ್ಲಿ, ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ದಾವಣಗೆರೆ, ಬೆಳಗಾವಿ,

ಬೀದರ್, ಉತ್ತರ ಕನ್ನಡ, ಕಲಬುರಗಿ, ಮಂಡ್ಯ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮುಕ್ತಾಯಗೊಂಡಿರುವ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವುದಕ್ಕಾಗಿ ರೂ.20.00 ಕೋಟಿಗಳ (ಇಪ್ಪತ್ತು ಕೋಟಿ ರೂಪಾಯಿಗಳು ಮಾತ್ರ) ಮೊತ್ತವನ್ನು ಈ ಮೂಲಕ ಬಿಡುಗಡೆಗೊಳಿಸಿ, ಖಜಾನೆ-2 ರಿಂದ ಸೆಳೆದು ವೆಚ್ಚ ಮಾಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಕ್ರ. ಸಂ	ಜಿಲ್ಲೆಯ ಹೆಸರು	ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಂದ ಅನುದಾನ ಬಿಡುಗಡೆ ಗೊಳಿಸುವಂತೆ ಕೋರಿ ಸ್ವೀಕೃತವಾದ ದಿನಾಂಕ	ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ	ಮುಕ್ತಾಯ ಗೊಂಡ ಕಾಮಗಾರಿಗಳ ಸಂಖ್ಯೆ	ಮುಕ್ತಾಯ ಗೊಂಡ ಕಾಮಗಾರಿಗಳ ಅನುದಾನದ ಮೊತ್ತ (ರೂ.ಗಳಲ್ಲಿ)
1	ದಾವಣಗೆರೆ	24.03.2025	26.03.2025	1	48,00,000.00
2	ಬೆಳಗಾವಿ	25.03.2025	04.04.2025	25	1,38,11,693.00
3	ಬೆಳಗಾವಿ	12.05.2025	14.05.2025	6	29,00,000.00
4	ಬೆಳಗಾವಿ	23.05.2025	28.05.2025	9	1,31,68,432.00
5	ಬೀದರ್	23.06.2025	03.07.2025	28	1,39,24,050.00
6	ಉತ್ತರ ಕನ್ನಡ	10.07.2025	28.07.2025	2	23,00,000.00
7	ಕಲಬುರಗಿ	11.07.2025	28.08.2025	35	1,69,55,800.00
8	ಬೆಳಗಾವಿ	18.07.2025	19.07.2025	31	1,55,11,962.00
9	ಕಲಬುರಗಿ	13.08.2025	28.08.2025	56	2,76,66,000.00
10	ಬೀದರ್	07.10.2025	29.12.2025	21	1,04,58,945.00
11	ಬೆಳಗಾವಿ	30.01.2026	18.02.2026	1	66,90,311.00
12	ಮಂಡ್ಯ	12.02.2026	26.02.2026	5	9,00,000.00
13	ವಿಜಯಪುರ	26.02.2026	06.03.2026	21	7,09,12,807.00
			ಒಟ್ಟು	**241**	**20,00,00,000.00**

ಷರತ್ತುಗಳು:-

1. ಮೇಲ್ಕಂಡಂತೆ ಬಿಡುಗಡೆಗೊಳಿಸಿರುವ ಮೊತ್ತವನ್ನು ಸಕ್ಕರೆ ಕಾರ್ಖಾನೆಗಳ ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಮುಕ್ತಾಯಗೊಂಡಿರುವ ಕಾಮಗಾರಿಗಳ ಬಿಲ್ಲನ್ನು ಆದ್ಯತೆ / ಜೇಷ್ಟತೆಯ ಮೇರೆಗೆ ಪಾವತಿಸತಕ್ಕದ್ದು (ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಕೃಷಿ ಮಾರಾಟ ಇಲಾಖೆ ಇವರ ಸ್ಥಳ ಪರಿಶೀಲನಾ ವರದಿಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ)

2. ಮೇಲ್ಕಂಡಂತೆ ಬಿಡುಗಡೆಗೊಳಿಸಿರುವ ಮೊತ್ತವನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಖಜಾನೆ-2ರ ಮೂಲಕ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡತಕ್ಕದ್ದು.

3. ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತವನ್ನು ವೆಚ್ಚ ಮಾಡಿರುವ ಕುರಿತು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಬಳಕೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-77

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿರುವ ಹೆಚ್ಚುವರಿ ಕಬ್ಬು ಬೆಲೆಯನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ: 08.11.2025
2. ಸರ್ಕಾರದ ಪತ್ರ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:11.11.2025 & 13.01.2026
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್ ಕೆ/ಎಸ್‌ಟಿಎಫ್/ಅನುದಾನ-01/2025-26, ದಿನಾಂಕ:19.02.2026

******

ಪ್ರಸ್ತಾವನೆ:-

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಇಳುವರಿ	ಎಫ್.ಆರ್.ಪಿ (ಪ್ರತಿ ಮೆ.ಟನ್‌ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಒಳಗೊಂಡಂತೆ (ರೂ.ಗಳಲ್ಲಿ)	ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ)	ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ)			ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ)
			ಸಕ್ಕರೆ ಕಾರ್ಖಾನೆಗಳು	ರಾಜ್ಯ ಸರ್ಕಾರ	ಒಟ್ಟು	
1	**2**	**3**	**4**	**5**	**6**	**7 (3 +6)**
9.5 % ಅಥವಾ ಕಡಿಮೆ	3290.50	ಕಾರ್ಖಾನೆಗಳು ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ	50	50	100	ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ

10.25%	3550.00	3100.00	50	50	100	3200.00
11.25%	3896.00	3200.00	50	50	100	3300.00

** 10.25 – 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

** 11.25 – 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

ಮೇಲೆ ಓದಲಾದ (2) ರ ಪತ್ರದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ ಆದೇಶಿಸಿರುವಂತೆ, ರಾಜ್ಯ ಸರ್ಕಾರದಿಂದ ಪ್ರತಿ ಮೆ.ಟನ್ ಗೆ ರೂ.50/- ಗಳ ಆರ್ಥಿಕ ನೆರವನ್ನು ಬಿಡುಗಡೆಗೊಳಿಸಬೇಕಾಗಿರುವುದರಿಂದ 2025-26 ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ಸರಬರಾಜು ಮಾಡಿದ ಕಾರ್ಖಾನೆವಾರು ಪ್ರಮಾಣ ಮತ್ತು ಬಿಡುಗಡೆಗೊಳಿಸಬೇಕಾದ ಮೊತ್ತ ಸದರಿ ಮೊತ್ತವನ್ನು ರೈತರಿಗೆ ಪಾವತಿಸಬೇಕಾದ ಕಾರ್ಯವಿಧಾನಗಳ ಕುರಿತು ಸ್ಪಷ್ಟ ಅಭಿಪ್ರಾಯದೊಂದಿಗೆ ನಿಗಧಿತ ನಮೂನೆಯಲ್ಲಿ ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಓದಲಾದ (3) ರ ಪತ್ರದಲ್ಲಿ, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ರೈತರು 2025-26ನೇ ಹಂಗಾಮಿನಲ್ಲಿ ದಿನಾಂಕ:15.02.2026ರ ಅಂತ್ಯಕ್ಕೆ ಕಬ್ಬು ಪೂರೈಸಿರುವ ಮತ್ತು ನುರಿಸಿರುವ ಕುರಿತು ಈ ಕೆಳಕಂಡ ವಿವರಗಳನ್ನು ಒದಗಿಸುತ್ತಾ, ರಾಜ್ಯ ಸರ್ಕಾರದಿಂದ ರೈತರಿಗೆ ಆರ್ಥಿಕ ನೆರವನ್ನು ನೀಡಲು ರೂ.300.00 ಕೋಟಿಗಳನ್ನು ಬಿಡುಗಡೆಗೊಳಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಕ್ರ.ಸಂ	ವಿವರಗಳು	ಅಂಕಿ ಅಂಶಗಳು
01	ಒಟ್ಟು ಕಾರ್ಖಾನೆಗಳ ಸಂಖ್ಯೆ	81
02	ಪ್ರಸುತ್ತ ಹಂಗಾಮು ಮುಕ್ತಾಯಗೊಳಿಸಿರುವ ಕಾರ್ಖಾನೆಗಳ ಸಂಖ್ಯೆ	29
03	ನುರಿಸಿರುವ ಕಬ್ಬಿನ ಪ್ರಮಾಣ (ಲಕ್ಷ ಮೆ.ಟನ್‌ಗಳಲ್ಲಿ)	521
04	ಕಳೆದ ಸಾಲಿನಲ್ಲಿ ನುರಿಸಿರುವ ಕಬ್ಬಿನ ಪ್ರಮಾಣ (ಲಕ್ಷ ಮೆ.ಟನ್‌ಗಳಲ್ಲಿ)	521
05	ಕಳೆದ ಸಾಲಿಗೆ ಹೋಲಿಸಿದರೆ ನುರಿಸಿರುವ ಶೇಕಡವಾರು ಕಬ್ಬಿನ್ ಪ್ರಮಾಣ	100%
06	2025-26ನೇ ಹಂಗಾಮಿನಲ್ಲಿ ಕಾರ್ಖಾನೆಗಳು ನುರಿಸಬುಹುದಾದ ಕಬ್ಬಿನ ಅಂದಾಜು ಪ್ರಮಾಣ(ಲಕ್ಷ ಮೆ.ಟನ್‌ಗಳಲ್ಲಿ)	600
07	ಪ್ರಸಕ್ತ ಹಂಗಾಮು ಮುಕ್ತಾಯಗೊಳ್ಳಬಹುದಾದ ಅಂದಾಜು ದಿನಾಂಕ	ಮಾರ್ಚ್ ಮೊದಲನೇ ವಾರ
08	ಪ್ರಸಕ್ತ ಹಂಗಾಮಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ಸರ್ಕಾರದದಿಂದ ಪಾವತಿಸಬೇಕಾದ ಮೊತ್ತ(ರೂ.ಕೋಟಿಗಳಲ್ಲಿ)	300

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಕಂಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025(ಭಾಗ-1)
ಬೆಂಗಳೂರು, ದಿನಾಂಕ:24ನೇ ಫೆಬ್ರುವರಿ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯದ ರೈತರಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ ಘೋಷಿಸಿರುವಂತೆ ಪ್ರತಿ ಒಂದು ಮೆ.ಟನ್ ಕಬ್ಬಿಗೆ ರೂ.50.00 ರಂತೆ ಆರ್ಥಿಕ ನೆರವನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ : 2852-08-201-0-07-100- "Special Incentives to Sugarcane Growers - Finance Assistance / Relief" ರಡಿ ರೂ.300.00 ಕೋಟಿಗಳ (ಮುನ್ನೂರು ಕೋಟಿ ರೂಪಾಯಿಗಳು ಮಾತ್ರ) ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ.

i. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಅನುದಾನದಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಂದ ಬಂದ ಪ್ರಸ್ತಾವನೆಯನ್ನು ಆಧರಿಸಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡತಕ್ಕದ್ದು.

ii. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆಗೊಳಿಸಿದ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಿರುವ ಕಬ್ಬಿನ ಪ್ರಮಾಣವನ್ನು ಆಧರಿಸಿ ನೇರವಾಗಿ ರೈತರ ಖಾತೆಗಳಿಗೆ ಹಣ ಜಮಾ ಮಾಡಲು ಕ್ರಮಕೈಗೊಳ್ಳತಕ್ಕದ್ದು.

iii. ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರತಿ ಮೆ.ಟನ್ ರೂ.50/- ರಂತೆ ಬಿಡುಗಡೆ ಮಾಡುವ ಮೊತ್ತದ ಜೊತೆಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ ನಿಗದಿಪಡಿಸಿದಂ ಕಾರ್ಖಾನೆಗಳಿಂದಲೂ ಸಹ ರೈತರಿಗೆ ಪ್ರತಿ ಮೆ.ಟನ್‌ಗೆ ರೂ.50/-ರಂತೆ ಹೆಚ್ಚುವರಿ ಬೆಲೆಯನ್ನು ಪಾವತಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳತಕ್ಕದ್ದು.

iv. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 2025-26ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ / ಮಾಡುವ ಕರ್ನಾಟಕ ರಾಜ್ಯದ ರೈತರಿಗೆ ಪ್ರತಿ ಮೆ.ಟನ್ ಗೆ ರೂ.50/-ರಂತೆ ಮಾತ್ರ ಪಾವತಿಸತಕ್ಕದ್ದು.

v. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ಮೊತ್ತವನ್ನು ವ್ಯಪಗತವಾಗದಂತೆ ಕಾಲಮಿತಿಯಲ್ಲಿ ಪಾವತಿಸಲು ಕ್ರಮಕೈಗೊಳ್ಳತಕ್ಕದ್ದು.

vi. ಸದರಿ ಆದೇಶವನ್ನು ತಿದ್ದುಪಡಿ ಮಾಡುವ / ಮಾರ್ಪಾಡಿಸುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 455 ವೆಚ್ಚ-1/2025, ದಿನಾಂಕ:08.01.2026 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-78

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೋಲಾರ ಜಿಲ್ಲೆಯ ಕೆ.ಜಿ.ಎಫ್., ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಎರಡು (02) ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಅಧ್ಯಕ್ಷರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಹಾಗೂ ಶಾಸಕರು, ಕೆ.ಜಿ.ಎಫ್., ವಿಧಾನ ಸಭಾ ಕ್ಷೇತ್ರ, ಕೋಲಾರ ಜಿಲ್ಲೆ ಇವರ ದಿನಾಂಕ : 22-07-2025ರ ಮನವಿ.
2. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಎ.ಬಿ.ಎಂ.ಟಿ. ಸಂಖ್ಯೆ: 4541/2025, ದಿನಾಂಕ : 08-10-2025.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ದಿನಾಂಕ : 22-07-2025ರ ಮನವಿಯಲ್ಲಿ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ನ್ಯಾಯಾಲಯದಲ್ಲಿ ಕಾರ್ಯ ಒತ್ತಡ ಹೆಚ್ಚಾಗಿದ್ದು, ಇಲ್ಲಿ ಹೆಚ್ಚುವರಿ ನೋಟರಿ ಅವಶ್ಯಕತೆ ಬಗ್ಗೆ ಸಾರ್ವಜನಿಕರಿಂದ ಬೇಡಿಕೆ ಇರುತ್ತದೆಂದು, ಕೆ.ಜಿ.ಎಫ್. ನ್ಯಾಯಾಲಯದಲ್ಲಿ ಹೆಚ್ಚುವರಿ ನೋಟರಿ ನೇಮಕಾತಿಗಾಗಿ ಅವಕಾಶ ಕಲ್ಪಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಕೋಲಾರ ಜಿಲ್ಲೆಯ ಕೆ.ಜಿ.ಎಫ್., ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸವ ಬಗ್ಗೆ ಪರಿಶೀಲಿಸಲು, ಕೆಲವು ಮಾಹಿತಿಯನ್ನು ಹಾಗೂ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ : 08-10-2025 ರ ಪತ್ರದಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹಾಗೂ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣ, ನ್ಯಾಯಿಕ ಚಟುವಟಿಕೆಗಳ, ಆರ್ಥಿಕ ಹಾಗೂ ಕಾನೂನು ಸಂಬಂಧಿತ ವಿಷಯಗಳ ಬಗ್ಗೆ ನೋಟರಿ ಸೇವೆಗಳಿಗೆ ಬೇಡಿಕೆ ಇರುತ್ತದೆಂದು, ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಿದಲ್ಲಿ ತಾಲ್ಲೂಕಿನ ಹೆಚ್ಚಿನ ಜನರನ್ನು ತಲುಪಲು ಸಾಧ್ಯವಾಗುವುದರಿಂದ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಕಂದಾಯ ತಾಲ್ಲೂಕಿಗೆ ಎರಡು ಹೆಚ್ಚುವರಿ ನೋಟರಿ ಹುದ್ದೆಗಳನ್ನು ಸೃಜಿಸಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರ ಪತ್ರದಲ್ಲಿನ ಅಭಿಪ್ರಾಯ ಹಾಗೂ ಮಾನ್ಯ ಶಾಸಕರು, ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರ, ಕೋಲಾರ ಜಿಲ್ಲೆ ಇವರು ಸಲ್ಲಿಸಿರುವ ಕೋರಿಕೆಯನ್ವಯ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಕೆ.ಜಿ.ಎಫ್., ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/252/2025,
ಬೆಂಗಳೂರು, ದಿನಾಂಕ : 16-03-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆಯ **ಕೆ.ಜಿ.ಎಫ್. ಕಂದಾಯ ತಾಲ್ಲೂಕಿಗೆ** ಹೆಚ್ಚುವರಿಯಾಗಿ **ಎರಡು (02)** ನೋಟರಿ ಹುದ್ದೆಗಳನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-79

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀನಗರ ಅಸೋಸಿಯೇಷನ್, ಬೆಂಗಳೂರು ಈ ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :- 1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ ಸಂಘ ಸಂಸ್ಥೆ-02/ 128/ 2025-26, ದಿನಾಂಕ:20.12.2025.

2. ಸರ್ಕಾರದ ಪತ್ರ ಸಂಖ್ಯೆ:ಸಿಒ 336 ಸಿಎಸ್‌ಆರ್ 2025, ದಿನಾಂಕ:07.02.2026.

3. ಸಹಕಾರ ಸಂಘಗಳ ಉಪ ನಿಬಂಧಕರು, ಎರಡನೇ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಆರ್‌ಬಿ-2/ನೋಂ/ಕಲಂ25/101/2025-26, ದಿನಾಂಕ:04.03.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1)ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ಶ್ರೀನಗರ ಅಸೋಸಿಯೇಷನ್, ಬೆಂಗಳೂರು ಈ ಕ್ಲಬ್‌ನ ವಿರುದ್ಧ ವಿವಿಧ ದೂರುಗಳಲ್ಲಿನ ಅಂಶಗಳ ಬಗ್ಗೆ ಸ್ವಯಂ ಪ್ರೇರಿತವಾಗಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ 25ರಡಿ ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಕ್ಲಬ್‌ನಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿ ಅವಧಿಯು ದಿನಾಂಕ:21.08.2025 ರಂದು ಮುಕ್ತಾಯಗೊಂಡಿದ್ದರೂ ಕ್ಲಬ್‌ನ ಹೊಸ ಆಡಳಿತ ಮಂಡಳಿ ಚುನಾವಣೆ ನಡೆಸದೇ ಕ್ಲಬ್‌ನ ಆಡಳಿತದಲ್ಲಿ ಮುಂದುವರೆದಿರುವುದು ಕ್ಲಬ್‌ನ ಉವನಿಯಮಗಳ ವಿರುದ್ಧವಾಗಿರುತ್ತದೆಂದು, ಕ್ಲಬ್‌ಗೆ ಸುಮಾರು 100 ಜನ ಸದಸ್ಯರನ್ನು ಸೇರ್ಪಡೆ ಮಾಡಿರುವ ಕ್ರಮವು ಸೂಕ್ತವಲ್ಲವೆಂದು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 13 ರಡಿಯಲ್ಲಿ 2022-23ನೇ ಸಾಲಿನವರೆಗೆ ಮಾತ್ರ ದಾಖಲಾತಿಗಳನ್ನು ಸಲ್ಲಿಸಿದ್ದು, ನಂತರದ ಅವಧಿಯ ವಾರ್ಷಿಕ ಸರ್ವ ಸದಸ್ಯರ ಸಭೆ ದಾಖಲಾತಿಗಳು ಮತ್ತು ಕ್ಲಬ್‌ನ ಲೆಕ್ಕಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವುದು ಕಲಂ 13ರ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸಿ ಅವರಿಂದ ಕ್ಲಬ್‌ನ ಅರ್ಹ ಸದಸ್ಯರನ್ನು ಗುರುತಿಸಿ ಕ್ಲಬ್‌ನ ಚುನಾವಣೆಯನ್ನು ನಡೆಸುವುದು ಸೂಕ್ತವೆಂದು

ಅಭಿಪ್ರಾಯಿಸಿ, ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸದಂತೆ ಹಲವು ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದರಿಂದ ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ಸದರಿ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಶ್ರೀನಗರ ಅಸೋಸಿಯೇಷನ್, ಬೆಂಗಳೂರು ಈ ಕ್ಲಬ್‌ಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ)ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಲ್ಲಿಸುವಂತೆ ಸಹಕಾರ ಸಂಘಗಳ ಉಪ ನಿಬಂಧಕರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(3)ರಲ್ಲಿ ಶ್ರೀನಗರ ಅಸೋಸಿಯೇಷನ್, ಬೆಂಗಳೂರು ಈ ಕ್ಲಬ್‌ನ ಆಡಳಿತ ಮಂಡಳಿ ಅವಧಿ ದಿನಾಂಕ:21-08-2025ಕ್ಕೆ ಮುಕ್ತಾಯಗೊಂಡಿದ್ದು, ಕಾರ್ಯಕಾರಿ ಸಮಿತಿಗೆ ಆಡಳಿತದಲ್ಲಿ ಮುಂದುವರೆಯುವ ಅಧಿಕಾರವಿರುವುದಿಲ್ಲ ಹಾಗೂ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ 13ರಡಿ ವಾರ್ಷಿಕ ಸರ್ವಸದಸ್ಯರ ಸಭೆ ದಾಖಲಾತಿಗಳು ಮತ್ತು ಕ್ಲಬ್‌ನ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ 27 (ಎ) ರನ್ವಯ ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸಿ ಆಡಳಿತಾಧಿಕಾರಿಯವರಿಂದ ಕ್ಲಬ್‌ನ ಅರ್ಹ ಸದಸ್ಯರನ್ನು ಗುರುತಿಸಿ ಸಂಘಕ್ಕೆ ಚುನಾವಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯದ ವರದಿಯನ್ನು ಸಲ್ಲಿಸಿರುತ್ತಾರೆ.

ಶ್ರೀನಗರ ಅಸೋಸಿಯೇಷನ್, ಬೆಂಗಳೂರು ಈ ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು ಪರಿಶೀಲಿಸಲಾಗಿ, ಕ್ಲಬ್‌ನಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿ ಅವಧಿಯು ದಿನಾಂಕ:21.08.2025 ರಂದು ಮುಕ್ತಾಯಗೊಂಡಿದ್ದರೂ ಕ್ಲಬ್‌ನ ಹೊಸ ಆಡಳಿತ ಮಂಡಳಿ ಚುನಾವಣೆ ನಡೆಸದೇ ಕ್ಲಬ್‌ನ ಆಡಳಿತದಲ್ಲಿ ಕ್ಲಬ್‌ನ ಉಪನಿಯಮಗಳ ವಿರುದ್ಧವಾಗಿ ಮುಂದುವರೆದಿರುವುದು, ಕ್ಲಬ್‌ಗೆ ಸುಮಾರು 100 ಜನ ಸದಸ್ಯರನ್ನು ಸೇರ್ಪಡೆ ಮಾಡಿರುವ ಕ್ರಮವು ಸೂಕ್ತವಾಗಿಲ್ಲದಿರುವುದರಿಂದ ಹಾಗೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 13 ರಡಿಯಲ್ಲಿ 2022-23ನೇ ಸಾಲಿನವರೆಗೆ ಮಾತ್ರ ದಾಖಲಾತಿಗಳನ್ನು ಸಲ್ಲಿಸಿದ್ದು, ನಂತರದ ಅವಧಿಯ ವಾರ್ಷಿಕ ಸರ್ವ ಸದಸ್ಯರ ಸಭೆ ದಾಖಲಾತಿಗಳು ಮತ್ತು ಕ್ಲಬ್‌ನ ಲೆಕ್ಕ ಪತ್ರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಕಲಂ 13ನ್ನು ಉಲ್ಲಂಘಿಸಿರುವು ಕಂಡುಬರುವುದರಿಂದ, ಸದರಿ ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಕ್ಲಬ್‌ನ ಬೈಲಾ ರೀತ್ಯ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ತೀರ್ಮಾನಿಸಿ ಶ್ರೀನಗರ ಅಸೋಸಿಯೇಷನ್(ರಿ), ಗಿರಿನಗರ 4ನೇ ಫಟ್ಟ, ಬನಶಂಕರಿ 3ನೇ ಹಂತ, ಬೆಂಗಳೂರು ಈ ಸಂಘದ ಆಡಳಿತಾತ್ಮಕ ಹಿತದೃಷ್ಟಿಯಿಂದ ಶ್ರೀ ಎನ್. ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, 2ನೇ ವಲಯ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಇವರನ್ನು ಕರ್ನಾಟಕ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರನ್ವಯ 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 336 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಶ್ರೀನಗರ ಅಸೋಸಿಯೇಷನ್(ರಿ), ಗಿರಿನಗರ 4ನೇ ಫೇಟ್ಸ್, ಬನಶಂಕರಿ 3ನೇ ಹಂತ, ಬೆಂಗಳೂರು ಈ ಸಂಘಕ್ಕೆ ಶ್ರೀ ಎನ್. ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, 2ನೇ ವಲಯ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-80

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH